fiscal discipline and fiscal correction ಫಲ ನಿಮಗೆ ಸಿಕ್ಕಿದೆಯೇ ಹೊರತು, ನಿಮ್ಮ ಶ್ರಮದಿಂದೇನೂ ಅಲ್ಲ. ಮಾನ್ಯ ಜಗದೀಶ್ ಶೆಟ್ಟರ್ ಮತ್ತು ಸಂಬಂಧಪಟ್ಟಂಥ ಮಂತ್ರಿಗಳು ಗಮನಿಸಬೇಕು, ನಿಮ್ಮ ಎಲ್ಲ ಕಡತಗಳೂ fail ಆಗಿವೆ. ಬರಗಾಲವನ್ನು ನಿಭಾಯಿಸುವುದರಲ್ಲಿ totally fail ಆಗಿದ್ದೀರಿ. ಮಳೆ ಯಾವಾಗ ಆಗುತ್ತದೋ ನಮಗೆ ಗೊತ್ತಿಲ್ಲ. ಹಾಗಾಗಿ ಮುಂದಿನ ಜೂನ್, ಜುಲೈವರೆಗೆ ಸರ್ಕಾರ ತಯಾರು ಆಗಬೇಕು. ಎಷ್ಟೇ ಹಣ ಖರ್ಚಾದರೂ ಕೂಡ ಮಾಡಬೇಕು. ಕೇವಲ ಸಮರೋಪಾದಿಯಲ್ಲಿ ಎನ್ನುವ ಪದವನ್ನು ಬಳಸುವುದಲ್ಲ, ನಿಜವಾಗಿ ಸಮಾರೋಪಾದಿಯಲ್ಲಿ, ನಿಜವಾದ ಅರ್ಥದಲ್ಲಿ ಅದು ಕ್ರಿಯೆಯಲ್ಲಿ ಬರಬೇಕು. ಕೂಡಲೇ ಸರ್ಕಾರ ಇವುಗಳಿಗೆಲ್ಲ ಮಾಹಿತಿಯನ್ನು ಒದಗಿಸಬೇಕು ಮತ್ತು ಸಮಾರೋಪಾದಿಯಲ್ಲಿ ಬರಗಾಲವನ್ನು ಎದುರಿಸಲು ಸಿದ್ಧವಾಗಬೇಕು. ತಾಲ್ಲೂಕು ಲೆವೆಲ್ ಕಮಿಟಿಗಳಾಗಬೇಕು. ಯಾವ್ಯಾವ ಮಂತ್ರಿಗಳು ಎಷ್ಟೆಷ್ಟು ವಿಸಿಟ್ ಮಾಡಿದ್ದಾರೆ, ಇದುವರೆಗೆ ಬರಗಾಲದ ಬಗ್ಗೆ ಎಷ್ಟು ರಿವ್ಯೂ ಮೀಟಿಂಗ್‌ಗಳನ್ನು ಮಾಡಿದ್ದಾರೆ ಎನ್ನುವ ಎಲ್ಲ ಮಾಹಿತಿಗಳನ್ನು ಕೊಡಬೇಕು. ಇಷ್ಟನ್ನು ಹೇಳಿ, ಇವತ್ತು ಇರುವಂಥ ತೀವ್ರವಾದಂಥ ಬರಗಾಲವನ್ನು ನೀವು ಗಂಭೀರವಾಗಿ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತಾ, ಸರ್ಕಾರ ಇದರಲ್ಲಿ ವಿಫಲವಾಗಿದೆ ಎಂದು ಹೇಳುತ್ತಾ, ಇದರ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

ಅಧ್ಯಕ್ಷರು: ಸಭೆಯನ್ನು ಮೂರೂಕಾಲು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸಭೆಯು ಮಧ್ಯಾಹ್ನ 2.15ಕ್ಕೆ ಮುಕ್ತಾಯಗೊಂಡು, ಭೋಜನ ವಿರಾಮದ ನಂತರ ಪುನ: 3.15ಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಅಪರಾಹ್ನ 3–38ಕ್ಕೆ ಸಮಾವೇಶಗೊಂಡಿತು) (ಸನ್ಮಾನ್ಯ ಉಪಾಧ್ಯಕ್ಷರು, ಶ್ರೀ ಎನ್.ವೈ. ಗೋಪಾಲಕೃಷ್ಣ ಪೀಠವನ್ನು ಅಲಂಕರಿಸಿದ್ದರು)

6. ನಿಯಮ 69ರ ಮೇರೆಗೆ ಚರ್ಚೆ :

ವಿಷಯ: 128 ತಾಲ್ಲೂಕ್‌ಗಳಲ್ಲಿ ಉಂಟಾಗಿರುವ ಬರ ಮತ್ತು ಪರಿಹಾರ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ವೈಫಲ್ಯದ ಕುರಿತು ಮುಂದುವರಿದ ಚರ್ಚೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಮ್ಮ ಅನೇಕ ಮುಖಂಡರುಗಳೆಲ್ಲರೂ ಮಾತನಾಡಿದ್ದಾರೆ. ಮತ್ತೆ ನಾನು ಅದೇ ವಿಚಾರವಾಗಿ ಮಾತನಾಡುವುದಿಲ್ಲ. ಕಳೆದ ಜೂನ್ ತಿಂಗಳ

ಕೊನೆಗೆ ಸರ್ಕಾರ ತನ್ನ ನಿಲುವನ್ನು ಪ್ರಕಟಿಸಿತು. ಕರ್ನಾಟಕ ರಾಜ್ಯದಲ್ಲಿ 2006ನೇ ಜೂನ್ ತಿಂಗಳಲ್ಲಿ 128 ತಾಲ್ಲೂಕುಗಳಿಗೆ ಬರ ಬಂದಿದೆ ಎಂದು ತೀರ್ಮಾನ ಮಾಡಿತು. ಈಗ ನಾವು ಫೆಬ್ರುವರಿ ತಿಂಗಳಿನಲ್ಲಿ ಇದ್ದೇವೆ. ಅಂದರೆ ಹೆಚ್ಚು ಕಡಿಮೆ ಈಗ ಎಂಟು ತಿಂಗಳಾಯಿತು. ಈ ಎಂಟು ತಿಂಗಳಲ್ಲಿ 128 ತಾಲ್ಲೂಕುಗಳಲ್ಲಿರತಕ್ಕಂಥ ಬರ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಈ ಸರ್ಕಾರ ಯಾವ ರೀತಿಯಾದ ಕಾರ್ಯಕ್ರಮವನ್ನು ರೂಪಿಸಿದೆ ಎಂದು ಇಡೀ ರಾಜ್ಯದ ಜನತೆಗೆ ಹೇಳಬೇಕು. ಏಕೆಂದರೆ, ಇವರ ಹತ್ತಿರ ಏನು ಕಾರ್ಯಕ್ರಮವಿಲ್ಲ. ಬರಗಾಲವನ್ನು ಎದುರಿಸಲಿಕ್ಕೆ ಒಂದು ನಿರ್ದಿಷ್ಟವಾದ ವಸ್ತುಸ್ಥಿತಿಯಾದಂಥ ಕಾರ್ಯಕ್ರಮವನ್ನು ಕ್ಯಾಬಿನೆಟ್‌ನಲ್ಲಿ ಕುಳಿತು ಚರ್ಚೆ ಮಾಡಿ ರೂಪಿಸುತ್ತಿಲ್ಲ. ಮಂತ್ರಿಗಳು ಬೇಕಾದ ಹಾಗೆ, ಬೇಕಾದ ಸಂದರ್ಭದಲ್ಲಿ ಬೇಕಾದ ರೀತಿಯಲ್ಲಿ ಹೇಳಿಕೆಗಳನ್ನು ಕೊಡುತ್ತಾ ಹೋಗುತ್ತಿದ್ದಾರೆ ಹೊರತು, ಕ್ಯಾಬಿನೆಟ್‌ನಲ್ಲಿ ಬರಗಾಲದ ಬಗ್ಗೆ ಗಂಭೀರವಾಗಿ ಚರ್ಚೆ ಮಾಡಿ ಒಂದು ಕ್ರಿಯಾ ಯೋಜನೆಯನ್ನು ರೂಪಿಸತಕ್ಕಂಥ ರೀತಿಯಲ್ಲಿ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಆಗಿಲ್ಲ. ಜೂನ್ ತಿಂಗಳಿನಿಂದ ಇದುವರೆಗೆ ಮಂತ್ರಿಮಂಡಲದ ಸದಸ್ಯರುಗಳ ಹೇಳಿಕೆಗಳನ್ನು ಯಾರಾದರೂ ಗಮನಿಸಿದರೆ ಆ ಹೇಳಿಕೆಗಳಲ್ಲಿ ಭಾರಿ ಸ್ಪಷ್ಟವಾಗುತ್ತದೆ ಇವರಲ್ಲಿ ಸಾಮೂಹಿಕವಾದಂಥ ಜವಾಬ್ದಾರಿ ಇಲ್ಲದೇ ಇರತಕ್ಕಂಥ ಬೇಜವಾಬ್ದಾರಿ ಸರ್ಕಾರ ಇದು ಎಂದು ಹೇಳತಕ್ಕಂಥದ್ದು.

ಬರಗಾಲಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರದು ಒಂದು ಹೇಳಿಕೆ, ಮಾನ್ಯ ಉಪ ಮುಖ್ಯಮಂತ್ರಿಯವರದು ಇನ್ನೊಂದು ಹೇಳಿಕೆ ಮತ್ತೆ ಮಾನ್ಯ ಆಲಂಗೂರು ಶ್ರೀನಿವಾಸ್‌ರವರದು ಇನ್ನೊಂದು ಹೇಳಿಕೆ, ನಮ್ಮ ಮಾನ್ಯ ಕಂದಾಯ ಮಂತ್ರಿಯವರದು ಮತ್ತೊಂದು ಹೇಳಿಕೆ, ಮಾನ್ಯ ಕೃಷಿ ಮಂತ್ರಿಯವರದು ಇಷ್ಟ ಬಂದ ರೀತಿಯಲ್ಲಿ ಒಂದು ಹೇಳಿಕೆ ಮತ್ತೆ ಯಾವ್ಯಾವ ಮಂತ್ರಿಗಳಿಗೆ ಮನಸ್ಸಿಗೆ ಏನೇನು ತೋಚುತ್ತದೆಯೋ ಅವರೆಲ್ಲಾ ಬರಗಾಲದ ಬಗ್ಗೆ ಒಂದೊಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಮಾನ್ಯ ಕಂದಾಯ ಮಂತ್ರಿಗಳು ಮುಂದೆ ಕುಳಿತುಕೊಂಡಿದ್ದಾರೆ. ಆದ್ದರಿಂದ, ಒಂದು ಪ್ರಶ್ನೆಯನ್ನು ಅವರಿಗೆ ಕೇಳುವುದಕ್ಕೆ ಇಷ್ಟಪಡುತ್ತೇನೆ. 128 ತಾಲ್ಲೂಕುಗಳಲ್ಲಿ ಈಗ ಬರಗಾಲ ಬಂದಿದೆ. ಆದ್ದರಿಂದ, ಬರಗಾಲ ಎಂದರೇನು? ಇದು ಏಕೆ ಬಂದಿದೆ? ಮತ್ತೆ ಅದನ್ನು ಎದುರಿಸಲಿಕ್ಕೆ ಬೇಕಾಗಿರತಕ್ಕಂಥ ಕಾರ್ಯಕ್ರಮ ಏನು ರೂಪಿಸಿದ್ದೀರಿ? ಕುಡಿಯುವ ನೀರಿನ ವ್ಯವಸ್ಥೆ, ದನಕರುಗಳಿಗೆ ಮೇವು, ಕೃಷಿ ಕಾರ್ಮಿಕರಿಗೆ ಕೆಲಸ ಮತ್ತೆ Capital investment ಅಂದರೆ, ಆಸ್ತಿ ಸೃಷ್ಟಿ ಮಾಡುವುದಕ್ಕೆ ಒಂದೊಂದು

ತಾಲ್ಲೂಕಿಗೆ ಎಷ್ಟು ಹಣ ಖರ್ಚು ಮಾಡಬೇಕು? ಮತ್ತೆ ಕೆಲಸ ಕೊಡುವುದಕ್ಕೆ ಎಷ್ಟು ಹಣ ಖರ್ಚು ಮಾಡಬೇಕು? ಅದಕ್ಕೆಲ್ಲಕ್ಕಿಂಥ ಮುಖ್ಯವಾಗಿ ಹೇಳುವುದೇನೆಂದರೆ, ಜೂನ್ ತಿಂಗಳಲ್ಲಿ ಮಳೆ ವಿಫಲವಾಗಿದೆ. ಅಂದರೆ, ಇವರೇ ಹೇಳಿರುವ ಪ್ರಕಾರ 30 ಲಕ್ಷ ಎಕರೆಗಳಲ್ಲಿ ಬೆಳೆ ನಷ್ಟವಾಗಿದೆ ಎಂದು ಹೇಳಿದ್ದಾರೆ. 30 ಲಕ್ಷ ಎಕರೆಗಳಲ್ಲಿ ಬೆಳೆ ನಷ್ಟವಾಗಿರುವುದರಿಂದ ನಮ್ಮ ರೈತನ ಪರಿಸ್ಥಿತಿ ಏನಾಗಿರುತ್ತದೆಂದು ಇವರು ಒಂದು ದಿವಸ ಕೂಡ ಆಲೋಚನೆ ಮಾಡಿಲ್ಲ. ಏಕೆಂದರೆ, ರೈತ ಬೆಳೆ ಇಟ್ಟಂಥ ಸಂದರ್ಭದಲ್ಲಿ ಲಕ್ಷಗಟ್ಟಲೆ ರೂಪಾಯಿಗಳ ಬಂಡವಾಳವನ್ನು ಅದಕ್ಕೆ ಹಾಕಿರುತ್ತಾನೆ. ಮನೆಯಲ್ಲಿರತಕ್ಕಂಥ ಒಡವೆ ಮತ್ತು ಏನೇನು ವಸ್ತು ಇರುತ್ತದೆಯೋ ಅವೆಲ್ಲವನ್ನು ಮಾರಾಟ ಮಾಡಿ ಆತ ಬಂಡವಾಳ ಹಾಕಿರುತ್ತಾನೆ. ಆದರೆ, ಈಗ ಆತನ ಬೆಳೆ ಹೋಗಿದ್ದರಿಂದ ಆತನ ಪರಿಸ್ಥಿತಿ ಏನು? ಆತನಿಗೆ ಪರಿಹಾರ ಕೊಡಲಿಕ್ಕೆ ಇವರು ಏನಾದರು ಕಾರ್ಯಕ್ರಮವನ್ನು ಹಾಕಿದ್ದಾರೆಯೇ? ಅಂದರೆ, ಬೆಳೆ ನಷ್ಟ ಆಗಿರತಕ್ಕಂಥ ರೈತನಿಗೆ ಪರಿಹಾರ ಕೊಡಲಿಕ್ಕೆ ಇವರೇನಾದರೂ ಕಾರ್ಯಕ್ರಮಗಳನ್ನು ಹಾಕಿದ್ದಾರೆಯೇ ಎಂಬುದರ ಬಗ್ಗೆ ಮಾನ್ಯ ಕಂದಾಯ ಮಂತ್ರಿಯವರು ಹೇಳಬೇಕು. ಇದು ಬಹಳ ಪ್ರಮುಖವಾದಂಥ ಅಂಶ. ನಮ್ಮ ನೆರೆಯ ಆಂಧ್ರ ಪ್ರದೇಶದಲ್ಲಿ ಬರಗಾಲ ಬಂದಿದೆ. ಅಲ್ಲಿ ಒಂದು ಹೆಕ್ಟೇರ್‌ಗೆ ಪ್ರತಿಯೊಬ್ಬ ರೈತನಿಗೆ 5 ಸಾವಿರ ರೂಪಾಯಿಗಳಂತೆ ಬೆಳೆ ನಷ್ಟಕ್ಕೆ ಪರಿಹಾರ ಕೊಟ್ಟಿದ್ದಾರೆ. ಆದ್ದರಿಂದ, ಇವರು ಏನು ಕೊಟ್ಟಿದ್ದಾರೆಂದು ಕೇಳಿ? ಬೆಳೆ ನಷ್ಟವಾಗಿರತಕ್ಕಂಥದ್ದನ್ನು ಇವರೇ ಒಪ್ಪಿದ್ದಾರೆ. ಆದ್ದರಿಂದ, ಇವರು ಒಪ್ಪಿದ ಮೇಲೆ ಅದಕ್ಕೆ ಪರಿಹಾರ ಏನು? ಅವರು 5 ಸಾವಿರ ಕೊಟ್ಟಿರುವುದರಿಂದ ನೀವು 5 ಅಥವಾ 10 ಸಾವಿರ ರೂಪಾಯಿ ಕೊಡಿ ಎಂದು ನಾನು ಕೇಳುತ್ತಿಲ್ಲ. ಒಟ್ಟಿನಲ್ಲಿ ಪರಿಹಾರ ಎನ್ನತಕ್ಕಂಥದ್ದನ್ನು ಕೊಡಬೇಕಲ್ಲವೇ? ಏಕೆಂದರೆ, ಆತ ಕೂಡ ಬಂಡವಾಳ ಹಾಕಿರುತ್ತಾನೆ. ಮತ್ತೆ ಆತನದು ಕೂಡ ಶ್ರಮ ಇರುವುದರ ಜೊತೆಗೆ ಮುಂದಿನ ವರ್ಷಕ್ಕೆ ಆತ ಬಿಕಾರಿ ಕೂಡ ಆಗುವುದಲ್ಲದೇ ಸಾಲಗಾರ ಸಹ ಆಗುತ್ತಾನೆ. ಅವನು ಬದುಕುವುದು ಹೇಗೆ? ಆತ ಇಡೀ ವರ್ಷ ಬದಕುವುದಕ್ಕೆ ಜೀವನ ಮಾಡಬೇಕು ಮತ್ತೆ ಹೆಂಡತಿ ಮಕ್ಕಳನ್ನು ಸಾಕಬೇಕು, ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಬೇಕು. ಕೃಷಿ ಆಧಾರದ ಮೇಲೆ ರೈತ ಜೀವನ ಮಾಡುತ್ತಿದ್ದಾನೆ. ಈಗ ಬೆಳೆ ನಷ್ಟವಾಗಿರುವಾಗ ಆತನ ಸಂಕಷ್ಟವನ್ನು ಪರಿಹಾರ ಮಾಡುವುದಕ್ಕೆ ಮತ್ತು ಆತನ ರಕ್ಷಣೆಗೆ ಈ ಸರ್ಕಾರ ಏನಾದರು ಕಾರ್ಯಕ್ರಮವನ್ನು ಹಾಕಿದೆಯೇ? ಯಾವುದೇ ಕಾರ್ಯಕ್ರಮವನ್ನು ಹಾಕಿಲ್ಲ. ಮತ್ತೆ ಬೆಳೆಗೆ ವಿಮೆ ಕೊಡುತ್ತೇವೆಂದು

ಇವರು ಹೇಳಿದ್ದರು. ಮಾನ್ಯ ಕೃಷಿ ಮತ್ತು ಕಂದಾಯ ಸಚಿವರು ಇಲ್ಲಿಯೇ ಇದ್ದಾರೆ. ಆದ್ದರಿಂದ ನಾನು ಕೇಳುವುದೇನೆಂದರೆ, ಈ ವರ್ಷದಲ್ಲಿ ಮತ್ತು ಹೋದ ವರ್ಷ ಹಾಗೂ ಅದರ ಹಿಂದಿನ ವರ್ಷ ಬೆಳೆ ವಿಮೆಗೆ ಎಷ್ಟು ಜನ ರೈತರು ಅರ್ಜಿಗಳನ್ನು ಹಾಕಿದ್ದಾರೆ? ನೀವು ಎಷ್ಟು ಜನಕ್ಕೆ ಕೊಟ್ಟಿದ್ದೀರಿ? ಈ ವರ್ಷ ಸಂಪೂರ್ಣವಾಗಿ ಬೆಳೆ ನಾಶವಾಗಿದೆ. ಆದ್ದರಿಂದ ಇದಕ್ಕೆ ವಿಮೆ ಹಣ ಕೊಡುವುದಕ್ಕೆ ಇವರು ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡು, ಹಣವನ್ನು ಇದಕ್ಕೋಸ್ಕರ ತೆಗೆದಿಟ್ಟಿದ್ದಾರೆಯೇ? ಇವರು ಹಣ ತೆಗೆದಿಟ್ಟಿಲ್ಲ. ಬೆಳೆ ನಷ್ಟಕ್ಕೆ ಮತ್ತು ರೈತನಿಗೆ ಮುಂದೆ ಬರತಕ್ಕಂಥ ದಿನಗಳಲ್ಲಿ ಆತ ಅನುಭವಿಸಬೇಕಾಗಿರತಕ್ಕಂಥ ಕಷ್ಟಗಳಿಗೆ ಏನು ಸಂಬಂಧವಿಲ್ಲದ ರೀತಿಯಲ್ಲಿ ಈ ಸರ್ಕಾರ ಇದೆ. ಇಂಥ ಒಂದು ನಾಚಿಗೆಗೆಟ್ಟ ಸರ್ಕಾರ, ರೈತರನ್ನು ರಕ್ಷಣೆ ಮಾಡುತ್ತೇವೆಂದು ಕೃಷಿ ನೀತಿಯನ್ನು ಪ್ರಕಟಣೆ ಮಾಡುತ್ತದೆ. ಯಾರಿಗೋಸ್ಕರ, ಯಾರ ಉದ್ಧಾರಕ್ಕೋಸ್ಕರ ಈ ಕೃಷಿ ನೀತಿ? ಕೃಷಿ ನೀತಿಯ ಬಗ್ಗೆ ಚರ್ಚೆ ಮಾಡುವಾಗ ಇದರ ಬಗ್ಗೆ ವಿವರವಾಗಿ ಹೇಳುತ್ತೇನೆ. ಈ ಕೃಷಿ ನೀತಿಯನ್ನು ತಂದು ನಾವು ರೈತರ ಪರವಾಗಿದ್ದೇವೆಂದು ಹೇಳತಕ್ಕಂಥ ಈ ಸರ್ಕಾರ ಕಳೆದ ಜೂನ್ ತಿಂಗಳಲ್ಲಿ ಬೆಳೆ ನಷ್ಟವಾಗಿರಕ್ಕಂತಹ ರೈತನ ಬಗ್ಗೆ ಇವತ್ತಿನವರೆಗೂ ಕೂಡ ಒಂದು ನಿರ್ದಿಷ್ಟವಾದಂಥ ಕಾರ್ಯಕ್ರಮವನ್ನು ಪ್ರಕಟಿಸಿಲ್ಲ. ಇದು ಒಂದು ಕಡೆಯಾದರೆ, ಮತ್ತೊಂದು ಕಡೆ ಏನಾಗಿದೆ ಎಂದರೆ, ಒಂದೊಂದು ತಾಲ್ಲೂಕಿನಲ್ಲಿ ಬರ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಸಮಗ್ರವಾಗಿ ಒಂದು ಕ್ರಿಯಾ ಯೋಜನೆಯನ್ನು ತಯಾರಿಸತಕ್ಕಂಥ ಏನಾದರೊಂದು ಸೂಚನೆಯನ್ನು ಈ ಸರ್ಕಾರ ತಾಲ್ಲೂಕು ಅಧಿಕಾರಿಗಳಿಗೆ ಕೊಟ್ಟಿದ್ದಾರೆಯೇ? ಟಾಸ್ಕ್ ಫೋರ್ಸ್ ಬಗ್ಗೆ ಮುಂದೆ ಕುಳಿತುಕೊಳ್ಳತಕ್ಕಂಥವರು ಮತ್ತು ನಾನು ಹಾಗೂ ಮಾನ್ಯ ಮಾಧುಸ್ವಾಮಿಯವರು ಬೊಬ್ಬೆಯಾಕಿ ಬಾಯಿ ಬಡಿದುಕೊಂಡಿದ್ದರಿಂದ ನಮಗೆ ಕುಡಿಯುವುದಕ್ಕೆ ನೀರಿಲ್ಲವೆಂದು ಟಾಸ್ಕ್ ಫೋರ್ಸ್ ಮಾಡಿ ಒಂದೊಂದು ತಾಲ್ಲೂಕಿಗೆ ಜೂನ್ ತಿಂಗಳಿಂದ 7.5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇವತ್ತಿನ ದಿವಸ ನಮ್ಮ ಶಾಸಕರ ಪರಿಸ್ಥಿತಿ ಏನಾಗಿದೆ ಎಂದರೆ, ಶಾಸಕರು ಕ್ಷೇತ್ರದಲ್ಲಿ ಎಲ್ಲಿಯೂ ಕೂಡ ತಲೆ ಎತ್ತಿಕೊಂಡು ಓಡಾಡುವಂತಿಲ್ಲ. ಜನ ಕುಡಿಯುವುದಕ್ಕೆ ನೀರು ಕೇಳುತ್ತಾರೆ. ಬೋರ್‌ವೆಲ್ ಕೊರೆಯಬೇಕೆಂದು ನಾವು ಕಂಟ್ರಾಕ್ಟ್‌ದಾರನಿಗೆ ಕೇಳಿದರೆ, ಆತ ನಮ್ಮನ್ನು ನೋಡಿದ ತಕ್ಷಣ ಓಡಿ ಹೋಗುತ್ತಾನೆ. ಏಕೆಂದರೆ, ಹಿಂದೆ ನಮ್ಮ ಮಾತನ್ನು ನಂಬಿ ಕಂಟ್ರಾಕ್ಟರ್ ಬೋರ್‌ವೆಲ್‌ನ್ನು ಕೊರೆದಿದ್ದ. ಆದರೆ, ಆತ ಬೋರ್‌ವೆಲ್ ಕೊರೆದಿದ್ದಕ್ಕೆ ಹಣ

ಕೊಟ್ಟಿಲ್ಲ. ಆದ್ದರಿಂದ, ಆತ ನಮ್ಮನ್ನು ಕಂಡರೆ ಓಡಿ ಹೋಗುತ್ತಾನೆ. ನಮ್ಮ ಹತ್ತಿರ ಆತ ಸುಳಿಯುವುದಿಲ್ಲ. ಮೊನ್ನೆ ದಿವಸ ಮಾನ್ಯ ಕಂದಾಯ ಮಂತ್ರಿಗಳು ಕೋಲಾರಕ್ಕೆ ಬಂದಿದ್ದರು. ಆ ಸಂದರ್ಭದಲ್ಲಿ ಅಧಿಕಾರಿಗಳ ಜೊತೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ನಾವು ಸ್ಪಷ್ಟವಾಗಿ ಏನು ಹೇಳಿದ್ದೇವೆಂದರೆ, ನನಗೆ ಬಂದಂಥ ಹಣದಲ್ಲಿ ಕೇವಲ ಮೋಟರ್, ಪಂಪ್ ಮತ್ತು ಪೈಪ್‌ಗೆ ಕೊಡುವುದಕ್ಕೆ ಮಾತ್ರ ಸಾಧ್ಯವಾಗುತ್ತದೆಂದು ಬೋರ್‌ವೆಲ್ ಡಿಗ್ ಮಾಡಿದರೆ ಹಣ ಕೊಡುವುದಕ್ಕೆ ಬರುವುದಿಲ್ಲವೆಂದು ಮತ್ತು ಆ ಅಧಿಕಾರ ನನಗೆ ಇಲ್ಲವೆಂದು ಡಿ.ಸಿ.ರವರು ಮಾನ್ಯ ಸಚಿವರ ಮುಂದೆಯೇ ಹೇಳಿದರು. ಕುಡಿಯುವ ನೀರಿಗೆ ಹಣವನ್ನು ಜಿಲ್ಲಾ ಪಂಚಾಯತ್‌ಗೆ ಕೊಟ್ಟಿದ್ದೇವೆಂದು ಸರ್ಕಾರ ಹೇಳಿದೆ. ಆದರೆ, ಅವರು ಜಿಲ್ಲಾ ಪಂಚಾಯತ್ ಸಭೆಯಲ್ಲಿ ಒಂದು ನಿರ್ಣಯಮಾಡಿ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಆ ಹಣವನ್ನು ಹಂಚಿದ್ದಾರೆ. ಒಬ್ಬೊಬ್ಬ ಸದಸ್ಯರು ಓವರ್ ಹೆಡ್ ಟ್ಯಾಂಕ್, ಅಂಡರ್ ಗ್ರೌಂಡ್ ವಾಟರ್ ಟ್ಯಾಂಕ್ ಮಾಡಿ ಹಣವನ್ನೆಲ್ಲಾ ಮುಗಿಸಿದ್ದಾರೆ. ಆದ್ದರಿಂದ ಅವರ ಹತ್ತಿರ ಹಣ ಇಲ್ಲ. ಈಗ ಸಿ.ಇ.ಓ.ರವರನ್ನು ಕೇಳಿದರೆ ಏನು ಹೇಳುತ್ತಾರೆಂದರೆ, ಜಿಲ್ಲಾ ಪಂಚಾಯತ್ ಮೆಂಬರ್ಸ್ ನಮಗೆ ಈಗಾಗಲೇ ಅಕ್ಷನ್ ಪ್ಲಾನ್ ಕೊಟ್ಟಿದ್ದಾರೆ. ಅದನ್ನು ಈಗ ಕ್ಯಾನ್ಸಲ್ ಮಾಡಿಕೊಡುವುದಕ್ಕೆ ನನಗೆ ಅಧಿಕಾರ ಇಲ್ಲ. ಮತ್ತೆ ಜಿಲ್ಲಾ ಪಂಚಾಯತ್ ಜನರಲ್ ಬಾಡಿ ಮೀಟಿಂಗ್ ಮಾಡಿ ಇದನ್ನು ಮಾಡುವುದಕ್ಕೆ ಆಗುತ್ತದೆಂದು ಅವರು ಹೇಳುತ್ತಾರೆ. ಆದರೆ, ಜಿಲ್ಲಾ ಪಂಚಾಯತ್ ಜನರಲ್ ಬಾಡಿ ಮೀಟಿಂಗ್ ಮಾಡಿದರೂ ಕೂಡ ಇದಕ್ಕೆ ಜಿಲ್ಲಾ ಪಂಚಾಯತ್ ಮೆಂಬರ್ಸ್ ಒಪ್ಪುವುದಿಲ್ಲ. ಆದ್ದರಿಂದ, ಈಗಾಗಲೇ ಬೋರ್‌ವೆಲ್ ಕೊರೆದಿರತಕ್ಕಂಥವರ ಪ್ರಶ್ನೆ ಏನು? ಇವತ್ತು ಮತ್ತೆ ಬೋರ್‌ವೆಲ್ ಕೊರೆಯಬೇಕಾಗಿದೆ. ಈಗಾಗಲೇ ನನ್ನ ಕ್ಷೇತ್ರದಲ್ಲಿ 40 ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡಿದ್ದಾರೆ. ಅದಕ್ಕೆ ಇನ್ನೂ ಹಣ ಕೊಟ್ಟಿಲ್ಲ. ಈಗ ಮತ್ತೆ ಇನ್ನೂ 50ಕ್ಕೆ ಬೇಡಿಕೆ ಬಂದಿದೆ. ಆದ್ದರಿಂದ, ಇದಕ್ಕೆ ಯಾರು ಜವಾಬ್ದಾರರು? ಬರಗಾಲ ಎದುರಿಸುವುದಕ್ಕೆ ನಮ್ಮಲ್ಲಿ ಹಣದ ಕೊರತೆ ಇಲ್ಲವೆಂದು ದಿನ ಬೆಳಗಾದರೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳುತ್ತಾರೆ. ಈ ರೀತಿಯಾಗಿ ಹೇಳತಕ್ಕಂತಹ ಜನರಿಗೆ ಹಣದ ಕೊರತೆ ಇಲ್ಲ. ಆದರೆ, ನಮಗೆ ತೊಂದರೆ ಇದೆ. ನಮಗೆಂದರೆ, ನನಗಲ್ಲ. ನಮ್ಮ ಕ್ಷೇತ್ರದ ಜನರಿಗೆ ಕುಡಿಯುವ ನೀರಿಗೆ ಕೊರತೆಯಾಗಿದೆ. ಆದ್ದರಿಂದ, ಇದಕ್ಕೆ ಯಾರು ಹಣ ಕೊಡುವವರು? ಕುಡಿಯುವ ನೀರಿಗೆ ಯಾವ್ಯಾವ ತಾಲ್ಲೂಕುಗಳಲ್ಲಿ ಎಷ್ಟು ಹಣ ಬೇಕಾಗುತ್ತದೆಂಬ ಸ್ಪಷ್ಟವಾದ ಮಾಹಿತಿ

ಇವತ್ತಿನವರೆಗೂ ಕೂಡ ಈ ಸರ್ಕಾರದ ಹತ್ತಿರ ಇಲ್ಲ. ಮಾಹಿತಿ ಇದ್ದರೆ ಹೇಳಿ ಬಿಡಲಿ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಇವರ ಹತ್ತಿರ ಮಾಹಿತಿ ಇಲ್ಲ. ಈಗಾಗಲೇ ನಮ್ಮ ವಿರೋಧಪಕ್ಷದ ನಾಯಕರಾಗಿರತಕ್ಕಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ ಕೇಂದ್ರದಿಂದ ಬಂದಿರತಕ್ಕಂಥ ಹಣ ಮತ್ತು ಇವರು ಕೊಟ್ಟಿರುವ ಹಣ ಎಷ್ಟೆಂದು ಕೇಳಿದರು. ಕೇಂದ್ರದಿಂದ ಬಂದಿರತಕ್ಕಂಥ ಹಣ ಸುಮಾರು 785 ಕೋಟಿ ರೂಪಾಯಿಗಳಿವೆ. 300 ಕೋಟಿ ರೂಪಾಯಿ ಕೊಟ್ಟಿದ್ದೇವೆಂದು ಇವರು ಹೇಳುತ್ತಿದ್ದಾರೆ. ಒಟ್ಟು ಸುಮಾರು 1000 ಕೋಟಿ ರೂಪಾಯಿಗಳಷ್ಟಾಗುತ್ತದೆ. ಇವತ್ತಿನ ದಿವಸ 128 ತಾಲ್ಲೂಕುಗಳಲ್ಲಿ ಬರ ಇದೆ. ಒಂದೊಂದು ತಾಲ್ಲೂಕಿಗೆ ಐದೈದು ಕೋಟಿ ರೂಪಾಯಿ ಪ್ರಕಾರ ಆಗಿದ್ದರೆ..

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೇ ಈಗಾಗಲೇ 700 ಕೋಟಿ ರೂಪಾಯಿ ಎಂದು ಹೇಳಿರತಕ್ಕಂಥದರಲ್ಲಿ 2 ವರ್ಷಗಳ ಹಣ ಅದರಲ್ಲಿ ಸೇರಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎರಡು ವರ್ಷವೆಂದರೆ, 2005-06 ಮತ್ತು 2006-07 ಇರಬಹುದು. ಆದರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಬಂದಾಗಿನಿಂದ ಲೆಕ್ಕ ಹೇಳುತ್ತಿದ್ದಾರೆ. ಒಟ್ಟಿನಲ್ಲಿ ಒಟ್ಟಿಗೆ ಇಷ್ಟು ಹಣ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್: ಎರಡು ವರ್ಷದಿಂದ ಬಂದಿರತಕ್ಕಂಥ ಹಣವೆಂದು ತಾವು ಹೇಳಿ. ಅದರಲ್ಲಿ ಎಷ್ಟು ಖರ್ಚಾಗಿದೆ ಎಂಬುದುನ್ನು ನಾನು ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎರಡು ವರ್ಷಗಳಿಂದ ಬಂದಿರತಕ್ಕಂಥ ಹಣವೆಂದು ಇಟ್ಟುಕೊಳ್ಳೋಣ. ಆದರೆ, ಇದರಲ್ಲಿ ನೀವು ಖರ್ಚು ಮಾಡಿರುವುದೆಷ್ಟು? 300 ಕೋಟಿ ರೂಪಾಯಿ ನೀವು ಖರ್ಚು ಮಾಡಿದ್ದೀರಿ. ಇದರಲ್ಲಿ ರಾಜ್ಯ ಸರ್ಕಾರ ಹಣವೆಷ್ಟು? ಅಂದರೆ, ನಿಮ್ಮ ಕಾಂಟ್ರಿಬ್ಯೂಷನ್ ಎಷ್ಟು? ಕೇಂದ್ರ ಸರ್ಕಾರ ಕೊಟ್ಟಿರುವ ಹಣವನ್ನು ನೀವು ಖರ್ಚು ಮಾಡಿಲ್ಲ. ಮತ್ತೆ ಇವರೂ ಕೂಡ ಹಣ ಕೊಟ್ಟಿಲ್ಲ. ಬರಗಾಲ ಇದೆ ಎಂದು ದಿನ ಬೆಳಗಾದರೆ ದೇಶದಲ್ಲೆಲ್ಲಾ ಪ್ರಚಾರ ಮಾಡಿಕೊಂಡು ಬರುತ್ತಿದ್ದೀರಿ. ಆದರೆ, ಬರಗಾಲ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಹಣ ಬಿಡುಗಡೆ ಏಕೆ ಮಾಡಲಿಲ್ಲ? ಅಕಸ್ಮಾತ್ ನಾವು ಬಿಡುಗಡೆ ಮಾಡಿದ್ದೇವೆಂದು ತಾವು ಹೇಳಬಹುದು. ಆದರೆ, ಬಿಡುಗಡೆ ಮಾಡಿದ್ದರೆ ಏತಕ್ಕಾಗಿ ಖರ್ಚು ಮಾಡಿಲ್ಲ? ನಿಮ್ಮ ಅಧಿಕಾರಗಳ ಬಗ್ಗೆ ಒಂದು ಉದಾಹರಣೆಯನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಒಂದೊಂದು ತಾಲ್ಲೂಕಿಗೆ

140 ಲಕ್ಷ ರೂಪಾಯಿಗಳ ಹಣ ಕೊಟ್ಟಿದ್ದೇವೆ. ಆದ್ದರಿಂದ ಇದಕ್ಕೆ ಕ್ರಿಯಾ ಯೋಜನೆಯನ್ನು ಕಳುಹಿಸಿ ಕೊಡಿ ಎಂದು ಕಳೆದ ನವೆಂಬರ್‌ನಲ್ಲಿ ಒಂದು ಪತ್ರವನ್ನು ಎಲ್ಲಾ ಶಾಸಕರಿಗೆ ಕಳುಹಿಸಿ ಕೊಟ್ಟರು. ನಾವು 148 ಲಕ್ಷ ರೂಪಾಯಿಗಳಿಗೆ ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟೆವು. ನಾವು ಕ್ರಿಯಾ ಯೋಜನೆಯಲ್ಲಿ ಕೊಟ್ಟಿರತಕ್ಕಂಥದ್ದರಲ್ಲಿ ಅರ್ಧಕ್ಕೆ ಮಾತ್ರ ಅದರಲ್ಲಿ ಅಪ್ರೂವಲ್ ಮಾಡಿದರು. ಇದಕ್ಕೆ ಹಣ ಬಿಡುಗಡೆ ಮಾಡುವಾಗ ಮತ್ತೆ ಅದರಲ್ಲಿ ಅರ್ಧ ಕಟ್ ಮಾಡಿದರು. ಅಂದರೆ, ಕಳೆದ ನವೆಂಬರ್ ತಿಂಗಳಿಂದ ಈಗಿನ ಫೆಬ್ರವರಿ ತಿಂಗಳವರೆಗೆ ಕೇವಲ 35 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಅಂದರೆ ಆ 145 ಲಕ್ಷ ರೂ.ಗಳನ್ನು ನಮಗೆ ಏನು ಕೊಟ್ಟರು ಅದನ್ನು ಕೂಡ ಪೂರ್ತಿ ಖರ್ಚು ಮಾಡಲಿಕ್ಕೆ ಅಧಿಕಾರಿಗಳು ತಯಾರಿಲ್ಲ, ಕೊಡಲಿಕ್ಕೂ ತಯಾರಿಲ್ಲ, ಕ್ರಿಯಾ ಯೋಜನೆ ಮಾಡಿ 5 ತಿಂಗಳಾಗಿದೆ. ಅವರು ಇರತಕ್ಕಂಥ ಹಣವನ್ನು ಬಿಡುಗಡೆ ಮಾಡುವುದಿಲ್ಲ ಅದಕ್ಕೆ ಅವರು 76 ಕೊಕ್ಕೆಗಳನ್ನು ಹಾಕುತ್ತಾರೆ. ಅದರ ಮೇಲೆ ಇವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ? ಇದರ ಅರ್ಥವೇನೆಂದರೆ, ಷೋಕೇಸ್‌ನಲ್ಲಿ ಬೊಂಬೆ ಇಟ್ಟುಬಿಡುವುದು, ನೋಡಿ ಎಷ್ಟು ಚೆನ್ನಾಗಿದೆ ಎಂದು ಹೇಳಿ ಬಿಡುವುದು, ನಾವು ಅದನ್ನು ನೋಡುತ್ತಾ ಕುಳಿತಿರುವುದು. ನಮ್ಮ ಹತ್ತಿರ ಹಣ ಇದೆ ಹಣ ಇದೆ, ನೋಡಲಿಕ್ಕೆ ಮಾತ್ರ ಹಣ ಇದೆ. ಅದು ಏನಾಗಿದೆ ಎಂದರೆ, ಊಟಕ್ಕೆ ಇಲ್ಲದ ಉಪ್ಪಿನಕಾಯಿ ತರಹವಾಗಿದೆ ಎಂದು ನಮ್ಮ ಕಡೆ ಶಾಸ್ತ್ರವನ್ನು ಹೇಳುತ್ತಾರೆ. ಅದರಿಂದ ಏನು ಪ್ರಯೋಜನವಿಲ್ಲ. ಆ ರೀತಿ ಇವತ್ತು ಇವರು ಬರಗಾಲ ಕಾಮಗಾರಿಯನ್ನು ಎದುರಿಸಲಿಕ್ಕೆ ಹಾಕಿರುವಂಥ ಕಾರ್ಯಕ್ರಮ, ಈ ಸರ್ಕಾರಕ್ಕೆ ಬರಗಾಲದ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಬೇಕಾದಂಥ ಬದ್ಧತೆಯಿಲ್ಲ. ಬರಗಾಲ ಬಂದರೆ ಭಾರಿ ಖುಷಿಯನ್ನು ಪಡತಕ್ಕಂಥವರು ಎರಡು ಗುಂಪು. ಒಂದು ಅಧಿಕಾರಿಗಳು, ಇನ್ನೊಂದು contractor ಗಳು. ಅವರಿಬ್ಬರಿಗೆ ಮಾತ್ರ ಖುಷಿ ಬೇರೆ ಯಾರಿಗೂ ಖುಷಿ ಇಲ್ಲ. ಶಾಸಕರಿಗೆ ಬೈಗುಳಗಳು ಜನ ಪ್ರತಿನಿಧಿಗಳಿಗೆ ಬೈಯಿಸಿಕೊಳ್ಳುವುದು. ಮಾತೆತ್ತಿದರೆ ಒಂದು Circular ಬರುತ್ತದೆ. ಜನಪ್ರತಿನಿಧಿಗಳಿಂದ ಅಭಿಪ್ರಾಯವನ್ನು ಪಡೆದು ಕ್ರಿಯಾ ಯೋಜನೆಯನ್ನು ತಯಾರಿಸಿ ಎಂದು ಎಲ್ಲರಿಗೂ ಭಾಗವನ್ನು ಇಟ್ಟುಬಿಡುತ್ತಾರೆ. ತಾಲ್ಲೂಕು ಪಂಚಾಯಿತಿಯಿಂದ ಹಿಡಿದು ಜಿಲ್ಲಾ ಪಂಚಾಯತಿಯವರೆಗೆ ಕೊಡುತ್ತಾರೆ, ಅವರ ಬಗ್ಗೆ ಜನ ಮಾತನಾಡುವುದಿಲ್ಲ. ಎಲ್ಲಾ ಬೈಯಿಸಿಕೊಳ್ಳುವುದು ಶಾಸಕರೆ. ನೀರು ಇಲ್ಲವೆಂದರೆ, ಕೊಳವೆ ಬಾವಿಗಳು

ಇಲ್ಲವೆಂದರೆ ಬೈಯಿಸಿ ಕೊಳ್ಳುವುದು ಶಾಸಕರೆ? ಹಣ ಎಲ್ಲಾ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಬೈಯಿಸಿಕೊಳ್ಳುವುದು ಮಾತ್ರ ಶಾಸಕರು. ಇವತ್ತು ಇಂತಹ ಹಣೇಬರಹ ನಮಗೆ ಬಂದಿದೆ. task force ಇವರು ಇದೆ ಎಂದು ಹೇಳುತ್ತಾರೆ. ಅದು 31ನೇ ತಾರೀಖು ಮುಗಿದು ಹೋಗಿರುತ್ತದೆ. ನಿಮ್ಮ Circular ಪ್ರಕಾರ ಮುಗಿದು ಹೋಗಿ 4 ತಿಂಗಳಾಯಿತು. ಮತ್ತೆ ಆ task force ನ್ನು constitute ಮಾಡುವುದಕ್ಕೆ ಇನ್ನೊಂದು ಹೊಸ Circular ಕಳುಹಿಸಿಲ್ಲ. ಅಥವಾ task force ಬೇಡ ಅದಕ್ಕೆ ಬೇರೆ ಬರಗಾಲದ ವ್ಯವಸ್ಥೆ ಸಲುವಾಗಿ ಏನಾದರೊಂದು ವ್ಯವಸ್ಥೆಯನ್ನು ಮಾಡಬೇಕಲ್ಲವೆ? ಅದನ್ನು ಎದುರಿಸಲಿಕ್ಕೆ, task force ಅವಧಿ 31ನೇ ತಾರೀಖಿಗೆ ಮುಗಿದು ಹೋಯಿತು. ಹೋಗಲಿ ನಿಮಗೆ task force ಮಾಡುವುದಕ್ಕೆ ಇಷ್ಟವಿಲ್ಲ ಬೇರೆ ಏನಾದರೂ ಪರ್ಯಾಯ ವ್ಯವಸ್ಥೆಯನ್ನು ಮಾಡಿ. ನಾವು ಏಕೆ task force ಕೇಳಿದ್ದು ನಮಗೇನು ಖುಷಿಗಾಗಿ ಅಲ್ಲ. ಈಗ task force ನ್ನು ರದ್ದು ಮಾಡಲಾಗಿದೆ. ರದ್ದು ಏಕೆ ಮಾಡಿದ್ದೇವೆಂದು ಕಾರಣವನ್ನು ಕೊಟ್ಟಿಲ್ಲ. ನಾವು ಈ ಸದನದಲ್ಲಿ task force ಬೇಕು ಎಂದು ಏಕೆ ತೀರ್ಮಾನ ಮಾಡಿದ್ದು ಎಂದರೆ, Single Window ದಿಂದ ಬರಗಾಲ ಪರಿಸ್ಥಿತಿಯನ್ನು war footing ನಲ್ಲಿ ಫೇಸ್ ಮಾಡಲಿಕ್ಕೆ task force ದಿಂದ ಸರಿಯಾಗುತ್ತದೆನ್ನುವ ಕಾರಣಕ್ಕೋಸ್ಕರ ಅದನ್ನು ಮಾಡಿದ್ದು.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಆ ಸಮಿತಿ ಅಸ್ತಿತ್ವದಲ್ಲಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮ Circular ಪ್ರಕಾರ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ: ಆದರೆ ದುಡ್ಡಿಲ್ಲ.

ಶ್ರೀ ಎಸ್. ಬಾಲರಾಜ್: ಆ ಸಮಿತಿ ಅಸ್ತಿತ್ವದಲ್ಲಿದೆ, ಆದರೆ ಅದಕ್ಕೆ ದುಡ್ಡು ಕೊಡುತ್ತಿಲ್ಲವಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜ್ಞಾನೇಂದ್ರರವರು ಬರಗಾಲದಲ್ಲಿ, ಇಲ್ಲಿ ಕುಳಿತಾಗ, ಅಷ್ಟೇ ಕೆಲಸವನ್ನು ನಮ್ಮಿಂದ ಮಾಡಿಸಿಕೊಂಡಿದ್ದಾರೆ. ಈಗ ಸ್ವಲ್ಪವಾದರೂ ಕೆಲಸ ಮಾಡಿಸಿ. ಓ, ಜ್ಞಾನೇಂದ್ರರವರೆ, ಆಗ ಬರಗಾಲದಲ್ಲಿ ನಮಗೆ ಬೈದು ಬೈದು ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದೀರಿ. ಈಗ ಸ್ವಲ್ಪವಾದರೂ ಬೈಯಿರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾರು ಬೈಯುತ್ತಾರೆ, ಅವರಿಗೆ ಈಗ ಎಲ್ಲಾ ಜವಾಬ್ದಾರಿ ಹೋಗಿದೆ. ಹೇಗೆಂದರೆ ಅವರು Land Army ಗೆ ಬೈಯುತ್ತಿದ್ದರು, ಈಗ ಅದು ಅವರಿಗೆ ಹೋಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಮಗೆ ಗೊತ್ತಿರುವಂಥದ್ದು time bound Task force ಆದರೆ ಅದನ್ನು modify ಮಾಡಿರುವ ಹೊಸ Circular ತಮಗೆ ಬಂದಿಲ್ಲವೆಂದು EO ಮತ್ತು ತಹಸೀಲ್ದಾರ್ ಹೇಳುತ್ತಾರೆ. ದಯವಿಟ್ಟು, ಇದ್ದರೆ ನಾವು ಒಪ್ಪಿಕೊಳ್ಳುತ್ತೇವೆ. ಅದಕ್ಕೆ ಏನು ನಾವು ತಕರಾರು ಮಾಡುವಂಥ ಅವಶ್ಯಕತೆ ಇಲ್ಲ. ಅದು ಏನು ದೊಡ್ಡ issue ಅಲ್ಲ. ಪ್ರಶ್ನೆ ಇರತಕ್ಕಂಥದ್ದು war footingನಲ್ಲಿ ಬರಗಾಲದ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಒಂದು ಏಜೆನ್ಸಿ ಬೇಕು ಎನ್ನುವ ಕಾರಣಕ್ಕೋಸ್ಕರ ಮತ್ತು ಕೆಲಸವಾಗಬೇಕು ಎನ್ನುವ ಕಾರಣಕ್ಕೋಸ್ಕರ ಬೇಗ ತೀರ್ಮಾನ ತೆಗೆದುಕೊಳ್ಳಬೇಕು ಎನ್ನುವ ಕಾರಣಕ್ಕೋಸ್ಕರ task force ನ್ನು ಮಾಡಿದ್ದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಅದಕ್ಕಿಂತ important, energizationದ್ದು. ಅಲ್ಲಿ ಪಂಚಾಯತಿಯವರು ದುಡ್ಡು task force ಮುಖಾಂತರ ಆದರೆ, ಸರ್ಕಾರ ಇಲ್ಲಿ ನೇರವಾಗಿ ದುಡ್ಡು ಕಟ್ಟುತ್ತಿದ್ದು. ಅದಕ್ಕೆ ಕಮಿಷನ್‌ನ್ನು ಕೊಡುತ್ತಿದ್ದರು. ಪುನ: ಅವರಿಗೆ ಕಟ್ಟಲಿಕ್ಕೆ ದುಡ್ಡು ಇಲ್ಲದೆ ತಿಂಗಳು ವರ್ಷಗಟ್ಟಲೆ ಕಾಯುತ್ತಾ ಅಲ್ಲಿ ಕುಳಿತಿದ್ದಾರೆ.

ಶ್ರೀ ಬಿ. ಶಿವರಾಂ: ಮಾನ್ಯ ಶ್ರೀರಾಮರೆಡ್ಡಿಯವರೆ, ಏನಾಗಿದೆ ಎಂದರೆ, ಈ revival mini water supply, major water supplyನಲ್ಲಿ ನೀರು ಹೋಗಿ ಬಿಟ್ಟರೆ ಒಂದು alternative ಬಾವಿಯನ್ನು ಹಾಕಿ ಬಿಡುತ್ತೇವೆ. ಮೊದಲು ಏನಿತ್ತು ವಿದ್ಯುಚ್ಛಕ್ತಿ ಇಲಾಖೆಯಿಂದ immediately ಕೆಲಸ ಮಾಡಿಕೊಳ್ಳಲಿಕ್ಕೆ, shifting provision. ಈಗ shifting provision ಇಲ್ಲ. Estimate cost ನ್ನು ತುಂಬಿ ಅಧಿಕೃತವಾಗಿ ಮಂಜೂರಾತಿಯನ್ನು ಪಡೆದು service ಮಾಡಿಸಬೇಕೆಂದರೆ estimate cost ತುಂಬುವುದಕ್ಕೆ ಎಷ್ಟು time ಆಗುತ್ತದೆ. ಆಮೇಲೆ service ಮಾಡುವುದಕ್ಕೆ ಎಷ್ಟು ದಿವಸ time ಆಗುತ್ತದೆ. ಈ shifting provision ತೆಗೆದು task force ನಲ್ಲಿ ಕೆಲಸವನ್ನು ಮಾಡಿ ಬರಗಾಲದಲ್ಲಿ ಬೇಗ ನೀರನ್ನು ಕೊಡಿ ಎಂದರೆ ಯಾವ ರೀತಿ ಕೊಡುವುದಕ್ಕೆ ಅನುಕೂಲವಾಗುತ್ತದೆನ್ನುವುದರ ಬಗ್ಗೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಯೋಚನೆ ಮಾಡಿ ಇದನ್ನಾದರೂ relax ಮಾಡಿಸಿ. ಮಾನ್ಯ ರವೀಂದ್ರನಾಥ್‌ರವರಿಗೆ ಹೇಳಿದರೆ ಅದು ಸಧ್ಯಕ್ಕೆ ಆಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಪಾಪ ಮಾನ್ಯ ರವೀಂದ್ರನಾಥ್‌ರವರ ಗ್ರಹಚಾರ ಸರಿಯಾಗಿಲ್ಲ, ಬೆಳಿಗ್ಗೆ ಮಾತನಾಡುವಾಗ ಅವರ ಪಾರ್ಟಿಯವರೆ ಹೇಳಿದರು. ಇವರಿಗೆ ಏನು power ಇಲ್ಲವೆಂದು. ಹಾಗಾಗಿ ಇದು ಸಂಪೂರ್ಣವಾಗಿ ಸರ್ಕಾರದ ಬೇಜವಾಬ್ದಾರಿತನ, ಮತ್ತೆ crop failure ಆಯಿತು.

ಈ ವರ್ಷ ಮಾನ್ಯ ಜಗದೀಶ್ ಶೆಟ್ಟರವರೆ, ಮಾನ್ಯ Food Minister ಇದ್ದಾರೋ ಇಲ್ಲವೋ ಗೊತ್ತಿಲ್ಲ. 24 ಲಕ್ಷ ಟನ್ ಆಹಾರ ಸಾಮಗ್ರಿಗಳ ಕೊರತೆ ಕರ್ನಾಟಕ ರಾಜ್ಯಕ್ಕೆ ಇದೆ, ಉತ್ಪಾದನೆ ಕಡಿಮೆಯಾಗಿದೆ. ಏನು ಮಾಡುತ್ತೀರಿ? ಅದಕ್ಕೆ ನೀವು ಏನು ಕಾರ್ಯಕ್ರಮವನ್ನು ಹಾಕಿದಿರಿ? Crops failure ಆಯಿತು. ಆಹಾರ ಉತ್ಪಾದನೆ ಕಡಿಮೆಯಾಗಿದೆ ಎಂದು ಹೇಳುವಂಥದ್ದರ ಬಗ್ಗೆ ಈ ಸರ್ಕಾರ ತಲೆ ಕೆಡಿಸಿಕೊಂಡಿರುವುದಿಲ್ಲ. ಏಕೆಂದರೆ ಮುಂದೆ crop ಬರತಕ್ಕಂಥದ್ದು ನವೆಂಬರ್ ಅಲ್ಲಿಯವರೆಗೆ ನಾವು ಕಾಯಬೇಕು. ಏನು ಪರಿಸ್ಥಿತಿ ಹೇಳಿ? ಕೇಂದ್ರ ಸರ್ಕಾರದವರು ಅಕ್ಕಿ, ಗೋಧಿ ಕೊಟ್ಟಿದ್ದಾರೆ, ಅದನ್ನು ಇವರಿಗೆ ಪರಿಣಾಮಕಾರಿಯಾಗಿ distribution ಮಾಡುವುದಕ್ಕಾಗುತ್ತಿಲ್ಲ. 3 ವರ್ಷವಾಯಿತು ರೇಷನ್ ಕಾರ್ಡ್ ಬಗ್ಗೆ, ಅದು ಮುಗಿದು ಹೋಯಿತು. ಇವರಿಗೆ ಒಂದು ರೇಷನ್ ಕಾರ್ಡ್ ಕೊಡುವುದಕ್ಕಾಗಲಿಲ್ಲ. ಒಂದು ಅಕ್ಕಿ ಕೊಡುವುದಕ್ಕಾಗಲಿಲ್ಲ, ಗೋಧಿ ಕೊಡುವುದಕ್ಕಾಗಲಿಲ್ಲ. ನಾವು ಬೈಯಿಸಿಕೊಂಡು ತಿರುಗಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ, ಅದನ್ನು ಬಿಡಿ. ಆಹಾರ ಸಾಮಗ್ರಿಗಳ ಉತ್ಪಾದನೆ ಕಡಿಮೆಯಾಗಿದ್ದರೆ ಅದರ ಪರಿಣಾಮ ಬೀರುವುದು ನೇರವಾಗಿ ಯಾರ ಮೇಲೆ? ಎಲ್ಲಾ ವಿಭಾಗದ ಜನರ ಮೇಲೆ ಬೀಳುತ್ತದೆ. ಸರ್ಕಾರಿ ಅಧಿಕಾರಿಗಳಿಗೆ ಕೊಂಡುಕೊಳ್ಳಲು ರೇಟ್ ಜಾಸ್ತಿಯಾಗಿ ಬಿಡುತ್ತದೆ. ಬೆಲೆ ಏರಿಕೆಯಾಗಿ ಬಿಡುತ್ತದೆ. ಕೃಷಿ ಕಾರ್ಮಿಕರಿಗೆ ಕಡಿಮೆ ರೇಟ್‌ಗೆ ಸಿಗುವುದಿಲ್ಲ. ಕಾರ್ಡ್ ಹಂಚಿಕೆಯಾಗಿಲ್ಲ. ಜನರು ಹೇಗೆ ಬದುಕಬೇಕು? ಈ ಕೊರತೆಯನ್ನು ನೀಗಿಸತಕ್ಕಂಥದ್ದು ಹೇಗೆ? Food production shortage ಆಗಿದೆ. ಇದನ್ನು ಹೇಗೆ ನೀಗಿಸುತ್ತಾರೆ? ಅದಕ್ಕೆ ಇವರ ಹತ್ತಿರ ಏನು ಕಾರ್ಯಕ್ರಮವಿಲ್ಲ. ಆಹಾರ ಸಾಮಗ್ರಿ ಕೊರತೆಯನ್ನು ನೀಗಿಸಲಿಕ್ಕೆ ಸರ್ಕಾರದವರು ಏನು ಕಾರ್ಯಕ್ರಮವನ್ನು ಹಾಕಿದ್ದಾರೆಂದು ಹೇಳಲಿ, ಅದರ ಜೊತೆಗೆ ಕೃಷಿ ಕಾರ್ಮಿಕರ ವಲಸೆ ಹೋಗುವುದಕ್ಕೆ ಹಲವಾರು ಕಾರಣಗಳನ್ನು ಹೇಳುತ್ತಾರೆ. ಆದರೆ ಮೂಲತ: ಅವರು ಕೆಲಸವಿಲ್ಲದೇ ವಲಸೆ ಹೋಗುವುದು. ಬೇರೆ ಯಾವ ಕಾರಣಗಳು ಅಲ್ಲ. ಕೆಲಸವಿಲ್ಲದೇ ಅವರು ವಲಸೆ ಹೋಗುತ್ತಿದ್ದಾರೆ. ಅದನ್ನು ತಡೆಗಟ್ಟತಕ್ಕಂಥ ಕಾರ್ಯಕ್ರಮ ಹಾಕಬೇಕು. ಇವತ್ತು ಇಲ್ಲಿ ಒಂದು ವಾದ ಬಂತು, ಅಲ್ಲಿ ಕೆಲಸವನ್ನು ಮಾಡಲಿಕ್ಕೆ ಕೃಷಿ ಕಾರ್ಮಿಕರು ಸಿಗುವುದಿಲ್ಲ. Machinery use ಮಾಡುವುದಕ್ಕೆ ಕೆಲವು ಶಾಸಕರು ಕೇಳಿದರು, ಇದು ವಾಸ್ತವಾಂಶ, ಇದು ನಿಜವೇ? ಏಕೆ ಗೊತ್ತೇನು? ಇಲ್ಲಿ ಏನು ಕೆಲಸವಿಲ್ಲವೆಂದು ಸುಮಾರು ಜನರು ಹೋಗುತ್ತಿದ್ದಾರೆ. ಹಾಗಾಗಿ ಅಲ್ಲಿ ಕೆಲಸಕ್ಕೆ ಕೃಷಿ ಕಾರ್ಮಿಕರು ಸಿಗುತ್ತಿಲ್ಲ. ಇನ್ನೊಂದು ಕಡೆ ನೀವು 3.20 ರೂ.ಗಳಿಗೆ

ಅಕ್ಕಿಯನ್ನು ಕೊಡುತ್ತೇವೆಂದು ಅಲ್ಲಿ ನೀವು 6 ರೂ.ಗಳಿಗೆ ಮಾರಾಟವನ್ನು ಮಾಡಿದರೆ ಯಾರು ಬರುತ್ತಾರೆ ಕೆಲಸವನ್ನು ಮಾಡುವುದಕ್ಕೆ? ಎಲ್ಲಿಂದ ಕೃಷಿ ಕಾರ್ಮಿಕರನ್ನು ತರುತ್ತೀರಿ? ಇದಕ್ಕೆ ಏನು ಕಾರ್ಯಕ್ರಮವನ್ನು ಹಾಕಿದ್ದೀರಿ? ಕೃಷಿ ಕಾರ್ಮಿಕರ ವಲಸೆಯನ್ನು ತಡೆಯಲಿಕ್ಕೆ ಇದು ಭಾರಿ ಅಮಾನವೀಯ. ಬೆಂಗಳೂರು ನಗರದಲ್ಲಿ ನೀವು ನೋಡಿ ಮೈಸೂರು ಕಡೆ ಹೋಗಿ, ಎಲ್ಲಿ ಬೇಕು ಅಲ್ಲಿ ಫುಟ್‌ಪಾತ್‌ನಲ್ಲಿ ಮಲಗಿದ್ದಾರೆ. ಅಲ್ಲಿ ಅಡಿಗೆ ಮಾಡಿಕೊಂಡು ತಿನ್ನುತ್ತಿದ್ದಾರೆ. ಅಲ್ಲಿಯೇ ಮಲಗುತ್ತಿದ್ದಾರೆ ಹಳ್ಳಿಗಳಿಂದ ಬಂದಿರುವವರು ಅವರಿಗೆ ಬೇರೆ ಏನು ವಿಧಿಯಿಲ್ಲ. ಅಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನು ತಡೆಯಲಿಕ್ಕೆ ಏನು ಕಾರ್ಯಕ್ರಮವನ್ನು ಹಾಕಿದ್ದೀರಿ? 5 ಜಿಲ್ಲೆಗಳಲ್ಲಿ Rural Employment Guaranty scheme ಇದೆ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅದನ್ನು ತಡೆಯುವ ಬಗ್ಗೆ ನೀವು ಏನು ಕಾರ್ಯಕ್ರಮವನ್ನು ಹಾಕಿದ್ದೀರಿ? 5 ಜಿಲ್ಲೆಗಳಲ್ಲಿ REGA ಅಂದರೆ Rural Employment Guarantee Scheme ಜಾರಿಯಲ್ಲಿದೆ. ಇದು ಸಂಪೂರ್ಣವಾಗಿ failure ಆಯಿತು. ಅದು failure ಆಗುವುದಕ್ಕೆ ನೇರವಾಗಿ ರಾಜ್ಯ ಸರ್ಕಾರವೇ ಹೊಣೆಯಾಗಿರುತ್ತದೆ. ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟರೂ ಕೂಡ ಅದರ ಬಗ್ಗೆ ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿ ಪಂಚಾಯಿತಿಯಲ್ಲಿ below poverty line ಎನ್ನುವವರ ಪಟ್ಟಿಯನ್ನು ಹಾಕಿ registration ಮಾಡಿಸುವಂತಹ ಹಂತದಲ್ಲಿಯೇ ಈ ಸರ್ಕಾರವು ಸಂಪೂರ್ಣವಾಗಿ ಎಡವಿ ಬಿತ್ತು. ಇದಕ್ಕೆ registration ಮಾಡಿಸಬೇಕು. ಆ registration ಕೆಲಸವೆ ಆಗಲಿಲ್ಲ. ಅದರ ಪರಿಣಾಮವೇನಾಯಿತು, ಅದು ಇವತ್ತು ದಳ್ಳಾಳಿಗಳ ಪಾಲಾಗಿದೆ. ಇಡೀ ಹಳ್ಳಿಗಳ REGA Scheme ನಲ್ಲಿ ಬಂದಂತಹ Rural Employment Guarantee Scheme ನಲ್ಲಿ ಬಂದಿರುವುದು contractor ಹಾಗೂ ದಳ್ಳಾಳಿಗಳು ತಿಂದುಬಿಟ್ಟು, ಕೃಷಿ ಕಾರ್ಮಿಕರಿಗೆ ಕೆಲಸವು ಹೋಯಿತು, ಹಾಗೂ ಸರ್ಕಾರಕ್ಕೆ ಹಣವು ಹೋಯಿತು. ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನು ಅವರುಗಳು ಪರಿಣಾಮಕಾರಿಯಾಗಿ ಉಪಯೋಗಿಸಿದ್ದರೆ ಅರ್ಧ ಬರಗಾಲವನ್ನು ನಾವು ಎದುರಿಸಬಹುದಾಗಿತ್ತು. ಅಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದರು. ಅದನ್ನು effective ಆಗಿ ಉಪಯೋಗಿಸುವಂತಹ ಒಂದು mechanism ಇಲ್ಲ. ಬೇಕಾದರೆ ಇವರನ್ನು ಕೇಳಿ. ಆ REGA scheme ವನ್ನು implement ಮಾಡುವುದಕ್ಕೆ ಇವರ ಹತ್ತಿರ staff ಇಲ್ಲ. ಗ್ರಾಮ ಪಂಚಾಯಿತಿಯಲ್ಲಿ staff ಇದೆಯೇ? Registration ಮಾಡಿಸುವವರು ಯಾರು? Entry ಮಾಡುವವರು

ಯಾರು? ಅದನ್ನು ನೋಡಿಕೊಳ್ಳುವವರು ಯಾರು? ಇವರು ಏನು ತಯಾರಿ ಮಾಡಲಿಲ್ಲ. ಅವರು ಹಣವನ್ನು ಕೊಟ್ಟರು, ಇವರು ಸುಮ್ಮನೆ ಬ್ಯಾಂಕಿಗೆ ಹಾಕಿಕೊಂಡು ಕುಳಿತುಕೊಂಡರು., ಪಂಚಾಯಿತಿಯವರಿಗೆ ಹೇಳಿದರು. Implement ಮಾಡಬೇಕಾದರೆ ಅದಕ್ಕೆ ಬೇಕಾಗಿರುವಂತಹ ಮೂಲಭೂತ schemeಗಳನ್ನು ಒದಗಿಸಿಕೊಡದೇ ಆ REGA scheme ಯಶಸ್ವಿಯಾಗುವುದಕ್ಕೆ ಸಾಧ್ಯವಿಲ್ಲ. ಅದರಿಂದಾಗಿ ಸಂಪೂರ್ಣವಾಗಿ ಅದು ವಿಫಲವಾಯಿತು. ಇವರು ಯಾವುದೇ ಕಾರ್ಯಕ್ರಮವನ್ನು ಹಾಕಲಿಲ್ಲ. ಹಾಗಾಗಿ ಇವತ್ತು ಲಕ್ಷಾಂತರ ಜನರು ಕೃಷಿ ಕಾರ್ಮಿಕರು ಹಳ್ಳಿಗಳಿಂದ ವಲಸೆ ಹೊರಟರು ಈಗ ನೀವು ಏನಾದರೂ ಕೆಲಸವನ್ನು ಕೊಟ್ಟರೂ ಕೂಡ, ಅಲ್ಲಿ ಬರಗಾಲದ ಕಾರ್ಯಕ್ರಮವನ್ನು ಮಾಡಿದರೂ ಕೂಡ, ನೀವು ಕೆಲಸವನ್ನು ಕೊಡುವುದಕ್ಕೆ, employment generation ಮಾಡುವುದಕ್ಕೆ, ಅಲ್ಲಿ ಜನರೇ ಇಲ್ಲ. ಅಲ್ಲಿ ಅವರು ಬಿಟ್ಟುಬಿಟ್ಟಿದ್ದಾರೆ. 128 ತಾಲ್ಲೂಕಿನಲ್ಲಿ ಇವತ್ತು ಬರಗಾಲ ಬಂದಿದೆ. ಈ ಬರ ಮಾನವ ನಿರ್ಮಿತವಾದಂತಹ ಬರ. ಇದು ಬೇರೆ ಏನೂ ಅಲ್ಲ. ನಾವು ಮಾಡಿರುವಂತಹ ಪಾಪದ ಕೆಲಸಗಳ ಪರಿಣಾಮವೇ ಈ ಬರ. ನಾವು ಸತತವಾಗಿ ಬರವನ್ನು ಎದುರಿಸುತ್ತಿದ್ದೇವೆ. ನಾನು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇದರ ಜೊತೆಗೆ ಈ ಬರಗಾಲಕ್ಕೆ ಏನೆಲ್ಲಾ ಖರ್ಚು ಮಾಡಿದ್ದೀರಿ ಎಂದು ಉತ್ತರವನ್ನು ಕೊಡುವಾಗ ಹೇಳುತ್ತೀರಿ. ಮಾನ್ಯ ಮಂತ್ರಿಗಳು ಹೇಳುತ್ತಾರೆ. ಅದರಲ್ಲಿ ಅರ್ಧ ಅಂಶವು ದುರುಪಯೋಗವಾಗಿದೆ. ಸರ್ಕಾರ ಏನು ಖರ್ಚು ಮಾಡಿದ್ದೇವೆಂದು ಈ ರಾಜ್ಯಕ್ಕೆ ಲೆಕ್ಕವನ್ನು ಕೊಡುತ್ತಾರೆ, ಈ ವಿಧಾನಸೌಧಕ್ಕೆ, ಈ ಸದನಕ್ಕೆ ಇದರಲ್ಲಿ ಅರ್ಧಾಂಶ ಸಂಪೂರ್ಣವಾಗಿ ದುರುಪಯೋಗವಾಗಿದೆ. ಅಧಿಕಾರಿಗಳು ಹಾಗೂ contractorಗಳು ನುಂಗಿ ನೀರನ್ನು ಕುಡಿದಿದ್ದಾರೆ. ಇದು ಯಾರ ಹಣ? ಇವತ್ತು ಬರಗಾಲದ ಹೆಸರಿನಲ್ಲಿ ರಾಜ್ಯದಲ್ಲಿ ಹಣವು ಲೂಟಿಯಾಗುತ್ತಿದೆ. ನೀವು ಇದನ್ನು ತಡೆಯುವುದರ ಬಗ್ಗೆ ಏನು ಕ್ರಮವನ್ನು ಮಾಡಿದ್ದೀರಿ? ಈ ಭ್ರಷ್ಟಾಚಾರವನ್ನು ಹಾಗೂ ಈ ದುರುಪಯೋಗವನ್ನು ತಡೆಯುವುದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಅವರುಗಳು ಕಾಮಗಾರಿಯ listನ್ನು ಕೊಡುತ್ತಾರೆ. ಅದು ಜಾರಿಯಾಗಿದೆಯೇ? ಇದು ಹೇಗೆ ದುರುಪಯೋಗವಾಗುತ್ತದೆ ಗೊತ್ತೆ? ಇವರು ಕ್ರಿಯಾ ಯೋಜನೆ ಮಾಡುವಾಗ 10,20,30 ಸಾವಿರ action planನ್ನು ತಯಾರು ಮಾಡಿಕೊಡುತ್ತಾರೆ. ಏನು ಮಾಡುವುದಕ್ಕಾಗುತ್ತದೆ? ಈ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು. We don't have money, we are only having currency. ಒಂದು ಕಿ.ಮಿ. ರಸ್ತೆಯನ್ನು ಮಾಡಬೇಕಾದರೆ perfect ಆಗಿ

ಇವತ್ತು 13 ಲಕ್ಷ ರೂ.ಗಳು ಬೇಕು. PMGSY normsನ್ನು ತೆಗೆದುಕೊಂಡರೆ 20 ಲಕ್ಷ, NABARD norms ತೆಗೆದುಕೊಂಡರೆ 13 ಲಕ್ಷ, Z.P.norms ತೆಗೆದುಕೊಂಡರೆ 10 ಲಕ್ಷ, ಎಷ್ಟು ಕಿ.ಮಿ. ರಸ್ತೆ ಮಾಡುವುದಕ್ಕೆ ಇವರು ಹಣವನ್ನು ಕೊಟ್ಟಿದ್ದಾರೆ ಕೇಳಿ? ಈ ಸರ್ಕಾರ ಒಂದೇ ಕಿ.ಮಿ. ರಸ್ತೆಯನ್ನು ಬರಗಾಲದಲ್ಲಿ ರಸ್ತೆಯನ್ನು ಮಾಡಿದ್ದಾರಾ, ಕೇಳಿ. ಇದು ಹೇಗೆ ದುರುಪಯೋಗವಾಗುತ್ತಿದೆ ಗೊತ್ತೆ? 10 ಸಾವಿರ 20 ಸಾವಿರ, 30 ಸಾವಿರ ಇವರು ಕೆಲಸ ಮಾಡುವಾಗ listನ್ನು ಮಾಡುವುದು.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಿಮಗೆ ಇದರ ಬಗ್ಗೆ ಗೊತ್ತಿದೆಯೋ ಇಲ್ಲವೋ, ಇಡೀ ರಾಜ್ಯಾದ್ಯಂತ 7069 work complete ಆಗಿದೆ. Progress ಇರುವುದು 7447, workಗಳು. ನಾನು NREP workಗಳ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು 5–5 ಸಾವಿರ ರೂ.ಗಳನ್ನು ಹಾಕಿಸಿದರೆ, ಅದು double ಆಗುತ್ತದೆ. ಈಗ 10–10 ಸಾವಿರದ workಗಳು ಇದೆ, 10 ರಿಂದ 20 ಸಾವಿರ ರೂಗಳ work ಹಾಕಿರುವುದರಿಂದ ಹಾಗೆ ಕಾಣುತ್ತದೆ. ಮಾನ್ಯ ಉದಾಸಿಯವರೆ ಅದನ್ನು 5–5 ಸಾವಿರಕ್ಕೆ ಇಳಿಸಿಬಿಡಿ. ಅದು double ಆಗುತ್ತದೆ. ಅದನ್ನು Assembly ಯಲ್ಲಿ ಹೇಳಿ. 14 ರಿಂದ 20 ಸಾವಿರ workಗಳು ಇವೆ ಎಂದು ಹೇಳಿಬಿಡಿ.

ಶ್ರೀ ಆಲಂಗೂರ್ ಶ್ರೀನಿವಾಸ (ಪೌರಾಡಳಿತ ಸಚಿವರು): ಯೋಜನೆಯನ್ನು ತಯಾರು ಮಾಡುವವರು ಯಾರು?

ಶ್ರೀ ಜೆ.ಸಿ. ಮಾಧುಸ್ವಾಮಿ: ಅದನ್ನು split ಮಾಡಿಸಿ.

ಶ್ರೀ ಆಲಂಗೂರ್ ಶ್ರೀನಿವಾಸ: ತಾವೇ ತಾನೇ ಯೋಜನೆಯನ್ನು ತಯಾರು ಮಾಡುವವರು?

ಶ್ರೀ ಜೆ.ಸಿ. ಮಾಧುಸ್ವಾಮಿ: 5–5 ಸಾವಿರ ರೂ.ಗಳಿಗೆ ಒಂದೊಂದು workಗಳನ್ನು ಹಾಕಿಬಿಡಿ. 20 ಸಾವಿರ ರೂ.ಗಳ work ನಡೆಯುತ್ತಿದೆ ಎಂದು ಹೇಳಿದರು.

ಶ್ರೀ ಆಲಂಗೂರ್ ಶ್ರೀನಿವಾಸ: ಮಾನ್ಯ ಮಾಧುಸ್ವಾಮಿಯವರೆ, ಅಧಿಕಾರಿಗಳು ಯಾರು ಯೋಜನೆಯನ್ನು ಮಾಡುವುದಿಲ್ಲ. ಯೋಜನೆಯನ್ನು ಮಾಡುವವರು ನಾವು ತಾನೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ಶಾಸನಸಭಾ ಸದಸ್ಯರಿಗೆ ಕಡ್ಡಾಯವಾಗಿ ನಮ್ಮ grant ನ್ನು ಕೇಳಿದರೆ 1 ಲಕ್ಷಕ್ಕಿಂತ ಕೆಳಗಡೆ workನ್ನು

ತೆಗೆದುಕೊಳ್ಳಬಾರದು ಎಂದು ನಮಗೆ ಹೇಳಿದ್ದೀರಿ. ಅದೇ ಮಾತನ್ನು ಜಿಲ್ಲಾ ಪಂಚಾಯಿತಿಯವರಿಗೆ ಹೇಳುವುದಕ್ಕೆ ದಮ್ಮು ಇದೆಯೇ? ಅದೇ ಮಾತನ್ನು TPSಗೆ ಹೇಳುವುದಕ್ಕೆ ದಮ್ಮು ಇದೆಯೇ? ಅದರಲ್ಲಿ ಅರ್ಧಮಾತನ್ನು RDPR Ministerಗೆ ಹೇಳುವುದಕ್ಕೆ ದಮ್ಮು ಇದೆಯೇ? ಎಲ್ಲಿ ಇದೆ? ನಾವು ಈ ಬಗ್ಗೆ challenge ಮಾಡುತ್ತೇವೆ.

ಶ್ರೀ ಸಿ.ಎಂ. ಉದಾಸಿ: ಈ NREP Programmeನಲ್ಲಿ ಗ್ರಾಮಪಂಚಾಯಿತಿಗಳಿಗೆ plan ಮಾಡುವುದರ ಸಲುವಾಗಿ ಅವಕಾಶವನ್ನು ಮಾಡಿಕೊಟ್ಟಿದೆ. ಅಲ್ಲಿ ಸ್ಥಳೀಯವಾಗಿ ಅವಶ್ಯಕತೆ ಇರುವಂತಹ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ಕನಿಷ್ಠ 50 ಜನರು ಕೆಲಸ ಮಾಡುವುದಕ್ಕೆ ಬರುತ್ತಿದ್ದಲ್ಲಿ ಕೆಲಸವನ್ನು ಪ್ರಾರಂಭ ಮಾಡಬೇಕು. 50 ಸಾವಿರದಿಂದ 1 ಲಕ್ಷದವರೆಗೆ ಹಾಗೂ 2 ಲಕ್ಷದವರೆಗೆ ಕೆಲಸ ಮಾಡುವುದಕ್ಕೆ ಅವಕಾಶವಿದೆ. ಇದರ ಪ್ರಕಾರ ಇವತ್ತು ಚಿತ್ರದುರ್ಗ ಒಂದರಲ್ಲಿಯೇ ಸುಮಾರು 49.47 ಕೋಟಿ ಹಣವನ್ನು ಖರ್ಚು ಮಾಡಿದ್ದೇವೆ. ಇದರ ಜೊತೆಗೆ ರಾಯಚೂರು ಜಿಲ್ಲೆಗೆ 19 ಕೋಟಿ ರೂ.ಗಳು, ಗುಲ್ಬರ್ಗಾಕ್ಕೆ 20 ಕೋಟಿ ರೂಪಾಯಿಗಳು, ದಾವಣಗೆರೆಗೆ 61 ಕೋಟಿ ರೂಪಾಯಿಗಳು, ಬೀದರ್‌ನಲ್ಲಿ 16 ಕೋಟಿ ರೂಪಾಯಿಗಳು.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಹಣ ಖರ್ಚಾಗಲಿಲ್ಲವೆನ್ನುಂತಹ ಮಾತನ್ನು ಹೇಳಲಿಲ್ಲ. asset ಏನು ಮಾಡಿದ್ದೀರಿ ಅದರ ಬಗ್ಗೆ ಒಂದು enquiryಯನ್ನು ಮಾಡಿಸಿ. ಯಾವ ಪಂಚಾಯಿತಿಯವರು memberವಾರು ಹಣವನ್ನು ಹಂಚಿಕೊಂಡಿಲ್ಲವೆಂದು ಹೇಳಿಬಿಡಿ ನಾವು ಅವರ ಪಾದಕ್ಕೆ ಬಂದು ಬಿದ್ದುಬಿಡುತ್ತೇವೆ. ಪಂಚಾಯಿತಿಯಲ್ಲಿ ಎಷ್ಟು ಹಣ divided by so many members ಎಂದು ಯಾರು ಮಾಡಿಲ್ಲವೆಂದು ತಾವು ಹೇಳಿದರೆ ನಾವು ಬಂದು ಅವರಿಗೆ ಶರಣಾಗುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ನಿಮಗೆ 1 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ, ಅವರು ಅಲ್ಲಿಗೆ ಹೋಗಿ ಕೆಲಸವನ್ನು ಮಾಡಬಾರದೇ? ನೀವು 1–1 ಕೋಟಿ ರೂ.ಗಳನ್ನು ಮಾಡಿಕೊಳ್ಳುತ್ತೀರಿ. ಮೆಂಬರ್‌ಗಳು ಅವರ ಕ್ಷೇತ್ರಕ್ಕೆ ಅವರುಗಳು ಹಂಚಿಕೊಂಡು ಮಾಡಬಹುದಲ್ಲವೇ?

ಶ್ರೀ ಸಿ.ಎಂ. ಉದಾಸಿ: ಮಾನ್ಯ ಸದಸ್ಯರುಗಳು ಹೇಳುವಂತಹ ಮಾತುಗಳು, ನಾವು ಗ್ರಾಮ ಪಂಚಾಯಿತಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದೇವೆ. ಅನುದಾನವನ್ನು ಬಿಡುಗಡೆ ಮಾಡುವುದರಲ್ಲಿ ಪಂಚಾಯಿತಿಯ ಸದಸ್ಯರು, ತಲಾವಾರು ಅನುದಾನಗಳನ್ನು ಹಂಚಿಕೊಂಡು ಅವರ ವಾರ್ಡ್‌ಗಳಲ್ಲಿ

ಕೆಲಸವನ್ನು ಮಾಡುತ್ತೇನೆಂದು ಹೇಳುತ್ತಿರುವುದು ಅದು ಸತ್ಯವಾದ ಸಂಗತಿಯಾಗಿದೆ. ಆದರೆ ಇಲ್ಲಿ ನಡೆಯುತ್ತಿರುವುದು ಏನಿದೆ, NREP Programmeನಲ್ಲಿ CEO, ZP ಏನಿದ್ದಾರೆ ಅವರು ಹಣ ಬಿಡುಗಡೆ ಮಾಡಬೇಕಾದಾಗ ಗ್ರಾಮಪಂಚಾಯಿತಿಗಳಿಗೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಆ ಬಿಡುಗಡೆ ಮಾಡಿರುವಂತಹ ಹಣವನ್ನು ಅವರುಗಳು ಕೆಲಸ ಮಾಡಬೇಕಾದಾಗ ಉಪಯೋಗಿಸಿಕೊಳ್ಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಆ CMGSY headನಲ್ಲಿ link documentನ್ನಾದರೂ ಹೋಗಲಿ ತೆಗೆಯಿರಿ. ಮುಖ್ಯಮಂತ್ರಿ ನಿಧಿಯೆಂದು ಕೊಡುತ್ತಿರಿ, ನೀವು ಅದನ್ನು ಕೂಡ ಮಾಡಿಸುವುದಕ್ಕೆ ಬಿಡಲಿಲ್ಲ. ರಸ್ತೆಗಳನ್ನು ಮಾಡಿಸುವುದಕ್ಕಾದರೂ ಬಿಡಿ.

ಶ್ರೀ ಸಿ.ಎಂ. ಉದಾಸಿ: ನಿಮ್ಮ ಸಲಹೆಗಳನ್ನು ಕೊಡಿ, ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಎಷ್ಟು ಸಲ ಕೋಡುವುದು ಸಾರ್. ಜಿಲ್ಲಾ ಪರಿಷತ್ತಿನ ರಸ್ತೆಗಳ ಸ್ಥಿತಿಯನ್ನು ನೋಡಿದ್ದೀರಾ ತಾವು. ಇವರ ಆದೇಶದ ವಿರುದ್ಧ ಅವರುಗಳು ಕೋರ್ಟಿಗೆ ಹೋಗಿ stay ಯನ್ನು ತರುತ್ತಾರೆ. ನೀವು ಏತಕ್ಕಾಗಿ Circularನ್ನು ಕೊಡುತ್ತೀರಿ Zilla Parishadಗೆ.

ಶ್ರೀ ಸಿ.ಎಂ. ಉದಾಸಿ: ನಿಮ್ಮೆಲ್ಲರ ಸಲಹೆಗಳನ್ನು ಗಮನಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಾವು ಇದನ್ನು ಪ್ರತಿಭಟಿಸಬೇಕಾಗುತ್ತದೆ.

ಶ್ರೀ ಸಿ.ಎಂ. ಉದಾಸಿ: ಇದರ ಬಗ್ಗೆ ತಿದ್ದುಪಡಿಯನ್ನು ತಂದಾಗ ತಾವುಗಳೆಲ್ಲರೂ ಈ ಬಗ್ಗೆ ಸಹಕಾರವನ್ನು ನೀಡಿದಾಗ ಅದನ್ನು ಮಾಡುತ್ತೇನೆ. ಒಂದು ನಿಮಿಷ. NREP ಬಗ್ಗೆ ಹೇಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಇದು ಯಾರ ಕಾರ್ಯಕ್ರಮ.

ಶ್ರೀ ಸಿ.ಎಂ. ಉದಾಸಿ: ಇದು ನಮ್ಮ ಕಾರ್ಯಕ್ರಮ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ಅವರು ಏನು ವಿಷಯವನ್ನು ಹೇಳುತ್ತಿದ್ದಾರೆ ಅದನ್ನು ತಿಳಿದುಕೊಳ್ಳಿ. ನಿಮ್ಮದು ಅಲ್ಲ ಎಂದರೆ ಅದು ಯಾರದು? ಅವರು ಮಾಡದೇ ಇನ್ಯಾರು ಮಾಡುತ್ತಾರೆ. ಅವರು ಏನು ಹೇಳುತ್ತಾರೆ ಅದಕ್ಕೆ ಅವಕಾಶವನ್ನು ಮಾಡಿಕೊಡಿ. ನೀವು ಯಾವುದು ಹೇಳುವುದಕ್ಕೆ ಬಿಡುವುದಿಲ್ಲವೆಂದರೆ, ಹಾಗಾದರೆ ಅವರು ಹೇಳುವುದು ಬೇಡವೆ?

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು: ರಾಜ್ಯ ಸರ್ಕಾರದವರು ಅದನ್ನು implement ಮಾಡಬೇಕಾಗಿರುವುದು. ಆ ಹಣ ನಿಮ್ಮದಲ್ಲ, ನೀವು ಹೇಳುವುದು ಬೇಡವೆಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ ಹೆಚ್.ಡಿ. ಬಸವರಾಜು: ಮಾನ್ಯ ಮಂತ್ರಿಗಳಿಗೆ ನೀವು ಹೇಳುವುದನ್ನು ಬೇಡ ಎಂದರೆ ಇದು ಯಾವ ತರಹ....

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ, ನೀವು ತಲೆಯನ್ನು ಕೆಡಿಸಿಕೊಳ್ಳಬೇಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಬಸವರಾಜುರವರೆ, ನಿಮ್ಮ ಮಂತ್ರಿಗಳು ಇಲ್ಲಿಯವರೆವಿಗೆ ಮಾಡಿರುವ ಎಲ್ಲಾ ಆದೇಶಗಳು High Courtನಲ್ಲಿ stay ಆಗಿದೆ ಎಂದು ತಮಗೆ ಗೊತ್ತಿದೆಯೇ?

ಶ್ರೀ ಹೆಚ್.ಡಿ. ಬಸವರಾಜು: ಅದರ ಬಗ್ಗೆ ನಾನು ಉಲ್ಲೇಖ ಮಾಡುತ್ತಿಲ್ಲ. ಮಾನ್ಯ ಸದಸ್ಯರು ಏನು ಹೇಳಿದರು ಅವರು ಮಾತನಾಡಿದ್ದೇಲ್ಲಾ, ಅವರಿಗೆ ಬೇಕಾಗಿರುವುದು ಮಾತ್ರ ನಾವು ಕೇಳುತ್ತಿದ್ದೇವೆಯೇ? ಮಾನ್ಯ ಮಂತ್ರಿಗಳು ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಅದನ್ನು ಕೇಳೋಣ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಂತ್ರಿಗಳು ಎಂದು ಗೌರವ Zilla Parishad ಗೆ ಇದೆಯೇ? ಸರ್ಕಾರ ಎಂದು TPSಗೆ ಇದೆಯೇ?

ಶ್ರೀ ಜೆ.ಸಿ. ಮಾಧುಸ್ವಾಮಿ: ಸಲಹೆ ಕೊಡುವುದಲ್ಲಾ ಸರ್, ನಿಮ್ಮ ಯಾವ ಆರ್ಡರ್‌ಗಳು ಇವತ್ತು ಹೈಕೋರ್ಟ್‌ಗೆ ಹೋಗಿಲ್ಲ, ಹೇಳಿ.

ಶ್ರೀ ಸಿ.ಎಂ. ಉದಾಸಿ: ಇವತ್ತೇನಾಗಿದೆ ಎಂದರೆ ನಮಗೆ ಅನುಭವಕ್ಕೆ ಬಂದಿರುವ ಮಾತುಗಳಲ್ಲಿ ಕಾನೂನನ್ನು ತಿದ್ದುಪಡಿ ಮಾಡಲಿಕ್ಕೆ ಹೊರಟಿದ್ದೇ ಆದರೆ, ನಮಗೆ ಕೊಟ್ಟಿರುವಂತಹ ಅಧಿಕಾರವನ್ನು ಕಸಿದುಕೊಳ್ಳಲಿಕ್ಕೆ ಪ್ರಯತ್ನ ಪಡುತ್ತಿದ್ದಾರೆಂದು ತಿಳಿದುಕೊಂಡು, ಅನವಶ್ಯಕ ಪ್ರಚಾರ ನಡೆಯುತ್ತಿದೆ. ನಿಮಗೆಲ್ಲಾ ಹಾಗೂ ನಮಗೆ ಅನುಭವಕ್ಕೆ ಬಂದ ಮೇಲೆ, ಇದರ ಬಗ್ಗೆ ತುರ್ತು ಆಲೋಚನೆ ಮಾಡಬೇಕಾಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಏನು ಮಾಡಿದಿರಿ, ನಾವು, ಮಾನ್ಯ ರಾಜಣ್ಣನವರು ಬಂದು 12th Finance Commission ಗೆ ಕೇಳಿದ್ದೇವೆ, meeting ಮಾಡಿದ್ದೇವೆ. ಒಂದು ರೂಪಾಯಿ ಕೆಲಸ ಮಾಡಲಿಕ್ಕೆ ಆಗಲಿಲ್ಲ. 60–70 ಲಕ್ಷ

ರೂ.ಗಳನ್ನು March 31 ರೊಳಗೆ ಮುಗಿಸಲಿಕ್ಕಾಗುತ್ತದೆಯೇ? 12th Finance Commission ನಲ್ಲಿ ತುಮಕೂರು ಜಿಲ್ಲೆ, ಕೋಲಾರ ಜಿಲ್ಲೆ ಮಾಡಿಸಿದ್ದೀರಾ?

ಶ್ರೀ ಸಿ.ಎಂ ಉದಾಸಿ: ಹಿಂದಿನ ಸಲ ನಾನು ಒಂದು ಸೂಚನೆಯನ್ನು ಕೊಟ್ಟಿದ್ದೇನೆ. Norms ಪ್ರಕಾರ ಆಗದೇ ಹೋದರೆ ಅದನ್ನು ರದ್ದು ಪಡಿಸುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಎಲ್ಲಿ ಬಿಟ್ಟಿದ್ದಾರೆ, ಮಾನ್ಯ ರಾಜಣ್ಣನವರೇ ಹೇಳಿ, ನಮ್ಮ ಜಿಲ್ಲಾ ಪರಿಷತ್‌ನಲ್ಲಿ ಕೆಲಸ ಮಾಡಲಿಕ್ಕೆ ಬಿಟ್ಟಿದ್ದಾರೆಯೇ?

ಉಪಾಧ್ಯಕ್ಷರು: ಈಗ ಮಾನ್ಯ ಉದಾಸಿಯವರೆ, ಉತ್ತರ ಕೊಡಬೇಕಾದರೆ ದಯವಿಟ್ಟು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಕೋಲಾರ ಜಿಲ್ಲಾ ಪರಿಷತ್‌ನಲ್ಲಿ ನಿಮ್ಮ ಆಲಂಗೂರು ಶ್ರೀನಿವಾಸ್‌ರವರು ಕುಳಿತುಕೊಳ್ಳುವುದಕ್ಕೆ ಬಿಟ್ಟಿದ್ದಾರೆಯೇ ಕೇಳಿ. ನನಗೆ ಬೇಡ, ಶ್ರೀನಿವಾಸ್‌ರವರಿಗೆ ಕುಳಿತುಕೊಳ್ಳುವುದಕ್ಕೆ ಬಿಟ್ಟಿದ್ದಾರೆಯೇ, ಕೇಳಿ.

ಶ್ರೀ ಸಿ.ಎಂ. ಉದಾಸಿ: ಮೂರ್‍ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ನಿಮ್ಮ ಸಮಸ್ಯೆಯಿರುವುದು. ಈಗಾಗಲೇ ಅವರಿಗೆ ಒಂದು ಸೂಚನೆಯನ್ನು ಕೊಟ್ಟಿದ್ದೇನೆ. N.R.E.P. ಬಗ್ಗೆ, ಒಂದು ನಿಮಿಷ, ಹೇಳಿ ಮುಗಿಸಿಬಿಡುತ್ತೇನೆ. N.R.E.P. ಯಲ್ಲಿ ತಮಗೆಲ್ಲರಿಗೂ ಗಮನಕ್ಕೆ ತರುವಂತಹ ಕೆಲಸ ಮಾಡುತ್ತಿದ್ದೇನೆ. ಕಾಮಗಾರಿಗೆ ಕೊಡುವುದು ಏನಿದೆ. ಒಂದು ಕುಟುಂಬಕ್ಕೆ ನೂರು ದಿವಸಕ್ಕೆ ಕೆಲಸ ಕೊಡುವ ಸಲುವಾಗಿ ಈ ಕಾಮಗಾರಿ ಬಂದಿದೆ. ಯಾರು ಈ ಕಾಮಗಾರಿಯಲ್ಲಿ ಸ್ವತಃ ಕೆಲಸ ಮಾಡಲಿಕ್ಕೆ ಬರುತ್ತಾರೆ, ಅವರ ಹೆಸರಿನಲ್ಲಿ ಬ್ಯಾಂಕ್ ಅಕೌಂಟ್ open ಮಾಡಿರಬೇಕು. ಅವರ ಹೆಸರು ನೋಂದಣಿಯಾಗಿರಬೇಕು. ಚೆಕ್ ಮೂಲಕ ಹಣ ಪಾವತಿ ಮಾಡಬೇಕು. ಈ ಹಣ ಪಾವತಿ ಮಾಡಬೇಕಾದಂಥ ಕೆಲಸವನ್ನು ಮಾಡುತ್ತಿದ್ದೇವೆ. ಇಲ್ಲಿಯವರೆಗೆ 167 ಕೋಟಿ ರೂ. ಖರ್ಚಾಗಿದೆ. ಕೇಂದ್ರದ ತಂಡವೂ ಸಹಿತ ಬಂದು ಪರಿಶೀಲನೆ ಮಾಡಿ, ಕರ್ನಾಟಕ ರಾಜ್ಯದಲ್ಲಿ 5 ಜಿಲ್ಲೆಗಳಲ್ಲಿ ಆಗಿರುವ ಕೆಲಸಕ್ಕೆ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆಂದು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ದುರುಪಯೋಗವಾಗುತ್ತಿದೆ ಎಂದು ಹೇಳಿದ್ದು ಬರಗಾಲಕ್ಕೆ ನೀವು ಬಿಡುಗಡೆ ಮಾಡಿದಂಥ ಹಣ. ನೀವು ಹೇಳುತ್ತಿರುವುದು REGA ಕಾರ್ಯಕ್ರಮದ್ದು. ಅದನ್ನು ನಾನು ಒಪ್ಪುತ್ತೇನೆ. ರೇಗಾ ಹಣ ಅದು ನಿಮ್ಮ ದುಡ್ಡು ಅಲ್ಲ. ಅದು ಕೇಂದ್ರ ಸರ್ಕಾರದ್ದು. ಅದನ್ನು implement ಮಾಡಬೇಕಾದದ್ದು ನೀವು. ಮಾನ್ಯ ಆಲಂಗೂರು ಶ್ರೀನಿವಾಸರವರು ಹೇಳಿದರು. ಶಾಸಕರಲ್ಲವೇ ಪಟ್ಟಿ ಮಾಡುವುದು, ನಿಜ. ಆದರೆ ನಿಮ್ಮ

ಸರ್ಕಾರದಿಂದ circular ಕಳುಹಿಸಿದ್ದಾರೆ. ನೀರಾವರಿಗೆ ಇಷ್ಟು, ವಾಟರ್ ಶೆಡ್‌ಗೆ ಇಷ್ಟು, ರಸ್ತೆಗೆ ಇಷ್ಟು, ಹಾರ್ಟಿಕಲ್ಚರ್‌ಗೆ ಇಷ್ಟು, ಬಿಲ್ಡಿಂಗ್ಸ್‌ಗೆ ಇಷ್ಟು, ಫಾರೆಸ್ಟ್‌ಗೆ ಇಷ್ಟು. ಅಲ್ಲೆಲ್ಲಾ ಹಂಚಿ ಸ್ವಾಮಿ. ಯಾವ ಕಿ.ಮೀ.ಗೆ ರಸ್ತೆ ಮಾಡುತ್ತೀರಿ ನೋಡೋಣ. ಏನು ಮಾತನಾಡುತ್ತೀರಿ, ಮಾತನಾಡಿದರೆ ಸ್ವಲ್ಪ ಅರ್ಥವಿರಬೇಕು. Action plan ಮಾಡುವುದು ನಾವೆ, ಅದಕ್ಕೆ ಕೊಕ್ಕೆ ಹಾಕಿ ಕಳುಹಿಸುವುದು ನಿಮ್ಮವರೆ, ಇಷ್ಟಿಷ್ಟಕ್ಕೆ ಇಷ್ಟಿಷ್ಟು ಮಾಡಬೇಕು, ವಾಟರ್ ಶೆಡ್ ಇಷ್ಟು ಮಾಡಬೇಕು ಎಂದು ಕಳುಹಿಸುತ್ತಾರೆ. ಹೀಗಾದರೆ ಏನು ಹಣವನ್ನು ಹಂಚುತ್ತೀರಿ ನೀವು. 30,000–00 25,0000 ರೂ.ಗಳ action plan ಮಾಡುವುದು. ಅವನು ಟ್ರಾಕ್ಟರ್ ಲೋಡ್‌ಗಳನ್ನು ಬಿಟ್ಟು ಬಿಲ್ಲು ಮಾಡಿ ನಿಮ್ಮ contractors, Engineers, ದುಡ್ಡು ಮಾಡಿಕೊಂಡು ಹೋಗುವುದು. ಈ ರೀತಿ ದುರುಪಯೋಗವಾಗುತ್ತಿದೆ. ಇದಕ್ಕೆ ಯಾರು ಹೊಣೆ? ನೂರಾರು ಕೋಟಿ ರೂಪಾಯಿಗಳು ಯಾರದ್ದು? ಈ ರಾಜ್ಯದ ಜನರ ಹಣವದು. ನೂರಾರು ಜನರ tax payers ಹಣವದು. ಯಾರೋ contractors, engineers ಲೂಟಿ ಹೊಡೆದುಕೊಂಡು ಹೋಗುತ್ತಿದ್ದರೆ action plan ಮಾಡುವುದು ನೀವು ಸಮರ್ಥನೆ ಮಾಡುತ್ತಿದ್ದೀರಾ? ನೀವು ತೆಗೆಸಿ ನೋಡಿ circular ನಲ್ಲಿ ಏನಿದೆ. ಯಾವ ರೀತಿಯಾಗಿ action plan ಮಾಡಲಿಕ್ಕೆ ಹೇಳಿರುವುದು ನೀವು. ಆದ್ದರಿಂದ ಈ ಹಣ ದುರುಪಯೋಗವಾಗುತ್ತಿದ್ದು, ಇವರು ಕ್ರಿಯಾ ಯೋಜನೆಗಳಿಗೆ ಕಳುಹಿಸಿರುವಂಥ ನಿಯಮಾವಳಿಗಳು ಏನಿವೆ, ಆ ನಿಯಮಾವಳಿಗಳೇ ಇವತ್ತು ಕೋಟ್ಯಾಂತರ ರೂಪಾಯಿ ಲೂಟಿ ಆಗಲಿಕ್ಕೆ ಕಾರಣವಾಗುತ್ತಿದೆ. Capital investment, development ಗೆ ನಿಮಗೆ ಹಣ ಖರ್ಚು ಮಾಡಲಿಕ್ಕೆ ಆಗುವುದಿಲ್ಲ. ಯಾವುದೆ ಸ್ಥಿರಾಸ್ತಿಯನ್ನು ಡೆವಲಪ್ ಮಾಡಲಿಕ್ಕೆ ಹಣ ಖರ್ಚು ಮಾಡಲಿಕ್ಕೆ ಆಗುವುದಿಲ್ಲ. ಮಣ್ಣು ಜೆಲ್ಲಿ ಬಿಟ್ಟು ದುಡ್ಡು ಹೊಡೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ನಾನು ಕೇಳುವುದು ಬರಗಾಲ ಅಂದ ತಕ್ಷಣ 30,000; 20,000/– ರೂ.ಗಳಿಗೆ action plan ಮಾಡಿ, ಯಾರಿಗೋ ನಮಗೆ ಬೇಕಾದವರಿಗೆ ನಮ್ಮ followers, contractersಗೆ ಬದುಕಲಿಕ್ಕೆ ಹಣ ಕೊಡುವುದಲ್ಲ ಇರತಕ್ಕಂಥದ್ದು. ಆಸ್ತಿ create ಮಾಡಬೇಕು. ಅದಕ್ಕೆ ಬೇಕಾಗುವಂಥ ನಿಯಮಾವಳಿಯನ್ನು ರೂಪಿಸಿ ನೀವು permanent asset ಮಾಡಲಿಕ್ಕೆ. ಒಂದು ರಸ್ತೆ ಮಾಡಿದ್ದೀರಾ? ಹೇಳಿ. ಆ REGA, ನಬಾರ್ಡ್ ಬಿಟ್ಟುಬಿಡಿ. ಯಾವುದೋ PMGSY ಬಿಟ್ಟುಬಿಡಿ. ಈ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳಿಗೆ ರಸ್ತೆಗೆ ಹಣ ಮೀಸಲಿಟ್ಟಿದ್ದೀರಲ್ಲಾ,

ನಾನು ಇವತ್ತು ಛಾಲೆಂಜ್ ಮಾಡಿಬಿಡುತ್ತೇನೆ, ಯಾವುದಾದರು ಒಂದು ತಾಲ್ಲೂಕನ್ನು ರ್‍ಯಾಂಡಮ್ ಆಗಿ ಚೆಕ್ ಮಾಡಿ. ಜಿಲ್ಲಾ ಪಂಚಾಯತ್ ಟಿ.ಪಿ.ಎಸ್. ನವರು 10 ಕಿ.ಮಿ. ರಸ್ತೆಯನ್ನು formation ಮಾಡಿ, ಮೆಟಲಿಂಗ್ ಮಾಡಿದ್ದಾರೆಯೇ ಎಂದು ತೋರಿಸಿಬಿಡಲಿ. ಶಾಸಕರಿಗೆ ಒಂದು ಪೈಸೆ ಬೇಡ, ಜಿಲ್ಲಾ ಪಂಚಾಯತ್‌ನವರಿಗೆ ಕೊಟ್ಟುಬಿಡುತ್ತೇವೆ ತೆಗೆದುಕೊಂಡು ಹೋಗಿ, ನಮಗೆ ಏತಕ್ಕೆ ಬೇಕು. ನಮಗೆ ಬೇಕಾಗಿರುವುದು ರಸ್ತೆ. ನೀವು ಎಷ್ಟು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೀರಿ ಜಿಲ್ಲಾ ಪಂಚಾಯತ್‌ನಿಂದ. ರಸ್ತೆಗಳ ಹೆಸರಿನಲ್ಲಿ ಎಷ್ಟು ಕಿ.ಮೀ.ರಸ್ತೆಗಳನ್ನು ಮಾಡಿಸಿದ್ದೀರಿ. ಇವತ್ತಿನ norms ಪ್ರಕಾರ ಒಂದು ಕಿ.ಮೀ. ರಸ್ತೆಗೆ 12.00 ಲಕ್ಷ ರೂ.ಗಳನ್ನು ಖರ್ಚು ಮಾಡಬೇಕು. ಯಾವ್ಯಾವ ಜಿಲ್ಲಾ ಪಂಚಾಯತ್‌ನಲ್ಲಿ ಎಷ್ಟೆಷ್ಟು ಕಿ.ಮೀ. ಆಗಿದೆ..

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಿಮ್ಮ ಆಕ್ಷೇಪಣೆ, ಜಿಲ್ಲಾ ಪಂಚಾಯತ್ ಸಿಸ್ಟಮ್ ಮೇಲೋ ಅಥವಾ RDPR ಮೇಲೆಯೇ? ಏನಿದು? Decentralized system ಅನ್ನು object ಮಾಡುತ್ತಿದ್ದೀರೊ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: Decentralized system ಅನ್ನು ನಾವು ಖಂಡಿತ ವಿರೋಧ ಮಾಡುವುದಿಲ್ಲ. ನಾವು ವಿರೋಧ ಮಾಡುತ್ತಿರುವುದು accountability + asset responsibility ಇಲ್ಲ, ಬಹಳ ಮುಖ್ಯವಾಗಿ, ಈ action plan ತಯಾರು ಮಾಡುವುದರಲ್ಲಿ ಇರತಕ್ಕಂಥ ಲೋಪ. ಜಿಲ್ಲಾ ಪಂಚಾಯ್ತಿ general body meeting, ತಾಲ್ಲೂಕು ಪಂಚಾಯ್ತಿ general body ಮೀಟಿಂಗ್‌ನಲ್ಲಿ ಏನಾಗುತ್ತಿದೆ, ಮಾನ್ಯ ಮಾಧುಸ್ವಾಮಿಯವರು ಹೇಳಿದಂತೆ ಗ್ರಾಮ ಪಂಚಾಯಿತಿಯಲ್ಲಿ ಹಂಚಿಕೊಳ್ಳುತ್ತಾರೆಂದು, ಅದೇ ರೀತಿಯಲ್ಲಿ ಹಂಚಿಕೊಳ್ಳುತ್ತಿರುವುದು, ಬೇರೆ ಏನೂ ವ್ಯತ್ಯಾಸವಿಲ್ಲ. SJRY ಹೆಸರಿನಲ್ಲಿ ನೀವು ಕೊಡುತ್ತೀರಿ. SJRY ಕೊಡುತ್ತೀರೋ ಇಲ್ಲವೋ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಮಂತ್ರಿಯವರು ಇದನ್ನು ಗಮನಿಸಬೇಕು. ಮಾನ್ಯ ರೆಡ್ಡಿಯವರು ಬಹಳ ಗುರುತರವಾದಂಥ ಆಪಾದನೆಯನ್ನು ಮಾಡಿದ್ದಾರೆ. ಬಹಳ ಭ್ರಷ್ಟಾಚಾರವಾಗಿದೆ. ಕೆಲವು engineers ಕೆಲವು ಜನಪ್ರತಿನಿಧಿಗಳು ಹಂಚಿಕೊಂಡಿದ್ದಾರೆಂದು ಹೇಳಿದ್ದಾರೆ. ಅವರು ಹೇಳಿದ್ದರಲ್ಲಿ ನಿಜವಿರಬಹುದು. ಆದರೆ ತಾಲ್ಲೂಕು ಮಟ್ಟದ ಒಂದು ವಿಜಿಲೆನ್ಸ್ ಕಮಿಟಿಯನ್ನು ನಮಗೆ ಮಾಡಿ, ಇದನ್ನೆಲ್ಲಾ supervision ಮಾಡಲಿಕ್ಕೆ ನಮಗೆ ಅಧಿಕಾರ ಕೊಟ್ಟಿದ್ದೀರಿ. ಅಲ್ಲಿ ಶಿಕ್ಷೆ ಕೊಡಲಿಕ್ಕೆ ಏನೂ ಬರುವುದಿಲ್ಲ. ಆದರೂ ಕೂಡ ನಾವು ಪಟ್ಟಿ ಮಾಡಿ ಮೇಲೆ ಕಳುಹಿಸಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ: ತಾವು ನಮ್ಮ assistanceಗೆ ಕೊಟ್ಟಿದ್ದೀರಲ್ಲಾ, ಬಿಲ್ ಮಾಡೊ engineer ಅನ್ನು ಕೊಟ್ಟಿರುವುದು. ವರ್ಕ್ ಲಿಸ್ಟ್ ಮಾಡೊ E.O. ನಮಗೆ ಕೊಟ್ಟಿರುವುದು ಅವರೇ sign ಅದಕ್ಕೆ ಮಾಡುವುದು. Payment ಮಾಡುವಾಗ ಯಾರು sign ಮಾಡಿರುತ್ತಾರೆ, ಅವರೇ ನಿಮ್ಮ ವಿಜಿಲೆನ್ಸ್ ಕಮಿಟಿಯಲ್ಲಿ ಕುಳಿತುಕೊಳ್ಳುವುದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ವಿಜಿಲೆನ್ಸ್ ಕಮಿಟಿಯಿಂದ ಇಲ್ಲಿಯವರೆಗೆ ಎಷ್ಟು ದೂರು ಬಂದಿವೆ ಎಂಬ ಬಗ್ಗೆ ಒಂದು ಪಟ್ಟಿಯನ್ನು ಕೊಡುವಿರಾ?

ಶ್ರೀ ಆರಗ ಜ್ಞಾನೇಂದ್ರ: ನಾನು ಆರೋಪ ಮಾಡಲಿಲ್ಲ. ಆರೋಪ ಮಾಡಿದಂಥದ್ದು ಮಾನ್ಯ ರೆಡ್ಡಿಯವರು. ಅಂತಹ ಆರೋಪಗಳು ಬಂದರೆ, particular ಆಗಿ ಇಂಥ ಆರೋಪವೆಂದು ಕೊಟ್ಟರೆ, ಮಾನ್ಯ ಸಚಿವರು ಅವರು ಹೇಳಿದ್ದರಲ್ಲಿ ಸತ್ಯವಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್.ಎಲ್. ಧರ್ಮೇಗೌಡ (ಬೀರೂರು): ಮಾನ್ಯ ಆರಗ ಜ್ಞಾನೇಂದ್ರರವರು ಹೇಳುತ್ತಿದ್ದಾರೆ ಯಾವುದಾದರೂ ಆರೋಪ ಬಂದರೆ ಕೊಡಿ ಎಂದು. ಆದರೆ ಮಾನ್ಯ ರೆಡ್ಡಿಯವರು ಕೊಡಲಿಕ್ಕೆ ಒಂದು ಆರೋಪ ಇದ್ದರೆ ಕೊಡಬಹುದು. ಮಾನ್ಯ ರೆಡ್ಡಿಯವರು ಇಲ್ಲಿ ಗಮನಿಸಬೇಕು. ಇಡೀ ರಾಜ್ಯಕ್ಕೆ ಸಂಬಂಧಪಡುತ್ತದೆ. ಮಾನ್ಯ ರೆಡ್ಡಿಯವರು, ಮಾನ್ಯ ಮಾಧುಸ್ವಾಮಿಯವರು ಹೇಳುತ್ತಿರುವುದು ಸರಿಯಿದೆ. ಒಂದು ವಿಚಾರವಾದರೆ ಇಂತಹದ್ದೇ particular ವಿಷಯವೆಂದು ಕೊಡಬಹುದು, ಇಡೀ ರಾಜ್ಯದಲ್ಲಿ 90 ಭಾಗ ಹೀಗೆ ನಡೆಯುತ್ತಿದೆ. ಹಾಗಾಗಿ ಮಾನ್ಯ ಶ್ರೀರಾಮರೆಡ್ಡಿಯವರು ಹಾಗೂ ಮಾನ್ಯ ಮಾಧುಸ್ವಾಮಿಯವರು ಮಾತನಾಡುತ್ತಿರುವುದು ಸರಿಯಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಆರಗ ಜ್ಞಾನೇಂದ್ರರವರು ವಿಜಿಲೆನ್ಸ್ ಕಮಿಟಿ ಬಗ್ಗೆ ಹೇಳಿದರು. ವಿಜಿಲೆನ್ಸ್ ಕಮಿಟಿಯಲ್ಲಿ ನಾವೇನಾದರೂ ಇಂತಹ ಕೆಲಸವಾಗಿಲ್ಲ, ಅದನ್ನು ತಡೆ ಹಿಡಿಯಿರಿ ಎಂದು ಹೇಳಿದರೆ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಮೆಂಬರ್ಸ್ ದೊಣ್ಣೆ ಹಿಡಿದುಕೊಂಡು ಬರುತ್ತಾರೆ. ನಾವು ಸೂಚನೆ ಮಾಡಿದ ಕೆಲಸ ನಿಲ್ಲಿಸಲಿಕ್ಕೆ ನಿಮಗೇನು ಅಧಿಕಾರವಿದೆ ಎಂದು ಕೇಳುತ್ತಾರೆ. ನೀವ್ಯಾರು ನಮಗೆ inspections ಮಾಡಲಿಕ್ಕೆ ಎನ್ನುತ್ತಾರೆ. ಏನು ಉತ್ತರ ಕೊಡುತ್ತಾರೆ ಹೇಳಲಿ, ವಿಜಿಲೆನ್ಸ್ ಕಮಿಟಿಯವರಿಗೆ ಏನು ರಕ್ಷಣೆ ಕೊಟ್ಟಿದ್ದಾರೆನ್ನುವುದಕ್ಕೆ ಉತ್ತರ ಹೇಳಲಿ. ವಿಜಿಲೆನ್ಸ್ ಕಮಿಟಿ ಅಧ್ಯಕ್ಷರಿಗೆ, ಸದಸ್ಯರಿಗೆ ಏನು ಅಧಿಕಾರ ಕೊಟ್ಟಿದ್ದಾರೆ ಹೇಳಲಿ. ವಿಜಿಲೆನ್ಸ್ ಕಮಿಟಿಗೆ ಕೊಟ್ಟಿರುವ ಅಧಿಕಾರವೇನೆಂದರೆ, tick mark ಹಾಕುವುದು. ಯಾರ ಮೇಲೆ

ಕ್ರಮತೆಗೆದುಕೊಳ್ಳಲಿಕ್ಕೆ ಅಧಿಕಾರ ಕೊಟ್ಟಿದ್ದೀರಿ. ಯಾರು ಅದನ್ನು ರದ್ದು ಮಾಡುತ್ತಾರೆ. ನಾವೇ ಅದನ್ನು ರದ್ದುಮಾಡಲಿಕ್ಕೆ ಶಿಫಾರಸ್ಸು ಮಾಡಬೇಕೆಂದರೆ ಯಾರಿಗೆ ಶಿಫಾರಸ್ಸು ಮಾಡಬೇಕು? ರಿಕವರಿ ಮಾಡುವಿರಾ? ನಮ್ಮ ವಿಜಿಲೆನ್ಸ್ ಕಮಿಟಿ recommendations ಜಾರಿ ಮಾಡಿ, ರದ್ದು ಮಾಡಿ, ಎನ್ನುವ ಅಧಿಕಾರವನ್ನು ಯಾರಿಗೆ ಕೊಟ್ಟಿದ್ದೀರಿ?

ಶ್ರೀ ಸಿ.ಎಸ್. ನಾಡಗೌಡರ್ (ಮುದ್ದೇಬಿಹಾಳ): ನಾವು ವಿಜಿಲೆನ್ಸ್ ಕಮಿಟಿಯಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದರೆ ಪುನ: ಅದೇ ಜಿಲ್ಲಾ, ತಾಲ್ಲೂಕು ಪಂಚಾಯ್ತಿಗೆ ಬರೆಯತಕ್ಕಂಥದ್ದು. ಇದನ್ನು ತಾವು ತೆಗೆದು ನೋಡಬಹುದು. Other than that we have no powers, ಯಾವ ರೀತಿಯಾಗಿ ನೀವು ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮ ವಿಜಿಲೆನ್ಸ್ ಕಮಿಟಿ ನಿಷ್ಪ್ರಯೋಜಕ. ನಮಗೆ ಸುಮ್ಮನೆ ಕೆಟ್ಟ ಹೆಸರು ತರಲಿಕ್ಕೆ ಇದೆ. ನಮಗೂ ಅವರಿಗೂ ಎತ್ತಿಕಟ್ಟಿ ಜಗಳ ಮಾಡಲಿಕ್ಕೆ. ಮನೆಗಳ beneficiaries ಸೆಲೆಕ್ಟ್ ಮಾಡಿದ್ದಾರೆ ಅದಕ್ಕೂ ವಿಜಿಲೆನ್ಸ್ ಕಮಿಟಿಯೇ. ಕೇವಲ ಅಲ್ಲಿ tick mark ಮಾಡಲಿಕ್ಕೆ ಅಷ್ಟೇ, ಹಾಗೇನಾದರೂ ಟಿಕ್ ಮಾರ್ಕ್ ಮಾಡಲಿಕ್ಕೆ ಹೋದರೆ ಇಡೀ ಪಂಚಾಯ್ತಿ ಜನ ನಮ್ಮ ಮೇಲೆ ಎದ್ದುಬಿಡುತ್ತಾರೆ. ಯಾರು ಸ್ವಾಮಿ ನಮಗೆ ರಕ್ಷಣೆ ಕೊಡುತ್ತೀರಿ? ಏನು ಅಧಿಕಾರ ಕೊಟ್ಟಿದ್ದಾರೆ ವಿಜಿಲೆನ್ಸ್ ಕಮಿಟಿಗೆ? ಸುಮ್ಮನೆ ಹೆಸರಿಗೆ ವಿಜಿಲೆನ್ಸ್ ಕಮಿಟಿ ಎಂದು ನಮಗೆ ಕೊಟಿದ್ದೀರಿ. ವಿಜಿಲೆನ್ಸ್ ಕಮಿಟಿ ಏತಕ್ಕೆ ಮಾಡಿದ್ದೀರಿ ಎಂದು ನಮಗೆ ಗೊತ್ತು. ಆಶ್ರಯ ಕಮಿಟಿಯಿಲ್ಲವೆಂದು ಶಾಸಕರನ್ನು ತೃಪ್ತಿಪಡಿಸಲಿಕ್ಕೆ ಮಾಡಿರುವಂಥ ಕಮಿಟಿ ಅದು. ಇದರಿಂದ ಮೂರು ಕಾಸೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ, ಹೀಗೆಲ್ಲಾ ಕಥೆ ಹೇಳಲಿಕ್ಕೆ ಬರಬೇಡಿ. ಇವತ್ತು ನಿಮಗೆ ಸವಾಲು, ಒಂದು ತಾಲ್ಲೂಕಿಗೆ, ಒಂದು ರಸ್ತೆ ಮಾಡಲಿಕ್ಕೆ ನೀವು ಕೊಟ್ಟಿರುವ ಹಣ ಎಷ್ಟು ಇದೆ, ಅದರಲ್ಲಿ ಎಷ್ಟು ಕಿ.ಮೀ ಪಕ್ಕಾ ರಸ್ತೆಯಾಗಿದೆ? ಒಂದು ತಾಲ್ಲೂಕಿಗೆ ಬನ್ನಿ. ನಾವೆಲ್ಲ ಒಟ್ಟಿಗೆ ಹೋಗಿ ಚೆಕ್ ಅಪ್ ಮಾಡೋಣ. ಆ ರೀತಿ ರಸ್ತೆಯಾಗಿದ್ದರೆ, ನೀವು ಏನು ಹೇಳಿದರೆ ಹಾಗೆ ಮಾಡಿ ನಾನು ಸಾರ್ವಜನಿಕವಾಗಿ ನಿಮ್ಮಲ್ಲಿ ಕ್ಷಮೆ ಕೇಳಿಬಿಡುತ್ತೇನೆ. ಯಾವ ತಾಲ್ಲೂಕು ಬೇಕಾದರೂ ನೀವೇ ಸೆಲೆಕ್ಟ್ ಮಾಡಿ, ನಾವು ಬೇಡವೆನ್ನುವುದಿಲ್ಲ. ನಾವು ಬರಲಿಕ್ಕೆ ರೆಡಿಯಿದ್ದೇವೆ. ನಿಮ್ಮ ತಾಲ್ಲೂಕು, ಆರ್.ಡಿ.ಪಿ.ಆರ್. ಸಚಿವರ ತಾಲ್ಲೂಕನ್ನೇ ಸೆಲೆಕ್ಟ್ ಮಾಡಿ. ನಾವು ಬರುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ನಿಮ್ಮ ಚಾಂಪಿಯನ್ ಬಳಿಗಾರ್‌ರವರು ಒಂದು ಸಾರಿ ಇವರ ಜಿಲ್ಲೆಗೆ ಹೋಗಿದ್ದರು. ನೀವ್ಯಾಕೆ ಹೋಗುತ್ತೀರಿ? ನಿಮ್ಮ ಚಾಂಪಿಯನ್ ಹೋಗಿ ಬಂದಿದ್ದಾರೆ. ಆಮೇಲೆ ನಾನಿಲ್ಲಿಗೆ ಬರಬಾರದಿತ್ತು ಎಂದಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಅವರು ಅಲ್ಲಿಗೆ ಹೋಗಿ ಬಂದ ಮೇಲೆ ನನ್ನ ಹತ್ತಿರ ಹೇಳಿದರು, ನಿಜ, ನೀವು ಹೇಳಿದ್ದು ಮೂರು ಜನ ಪಂಚಾಯತ್ ಆಫೀಸರ್ಸ್ ಅನ್ನು ಸಸ್ಪೆಂಡ್ ಮಾಡಿ ಬಂದಿದ್ದೇನೆ ಎಂದು ಹೇಳಿದರು. ಮುಳಬಾಗಿಲಿನಲ್ಲಿ ಆಲಂಗೂರು ಶ್ರೀನಿವಾಸ್‌ರವರ ಕ್ಷೇತ್ರದಲ್ಲಿ ಆಫೀಸರ್ಸ್ ಅನ್ನು ಸಸ್ಪೆಂಡ್ ಮಾಡಿ ಬಂದಿದ್ದು. ಹೌದೋ ಅಲ್ಲವೋ ಮಾನ್ಯ ಶ್ರೀನಿವಾಸ್‌ರವರೇ ಹೇಳಿ. ಏನಾಗುತ್ತಿದೆ ಈ ದೇಶದಲ್ಲಿ, ಈ ರಾಜ್ಯದಲ್ಲಿ? ಯಾರ ಹಣ ಸರ್ ಅದು? ಕ್ರಿಯಾ ಯೋಜನೆಯಲ್ಲಿ ನಿಮ್ಮ ಲೋಪ ಇರತಕ್ಕಂಥದ್ದು.

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಸದಸ್ಯರದ್ದೇನು ಕಳವಳ ಇದೆ. ಅದು ನನಗೂ ಅನುಭವಕ್ಕೆ ಬಂದಿದೆ. ಬಹಳ ಕಡೆಯಲ್ಲಿ ಈ ಸಮಸ್ಯೆ ಸೃಷ್ಟಿಯಾಗಿದೆ. ನಾವು ನಿರೀಕ್ಷೆ ಮಾಡಿದ್ದು ಏನೆಂದರೆ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಜನರ ಕೈಗೆ ಅಧಿಕಾರವನ್ನು ಕೊಟ್ಟರೆ, ಪಾರದರ್ಶಕವಾಗಿ ಆಡಳಿತ ನಡೆಯುತ್ತಿದೆ. ಜನರ ಸಮ್ಮುಖದಲ್ಲಿ ಎಲ್ಲವೂ ತೀರ್ಮಾನವಾಗುತ್ತದೆ. ಅವರಿಗೆ ಸಂಪೂರ್ಣವಾಗಿ ಸ್ವಾತಂತ್ರ್ಯ ಕೊಡಬೇಕೆಂಬ ಸದುದ್ದೇಶದಿಂದ ಕಾನೂನೇನೋ ಮಾಡಿದೆ. ಕಾನೂನು ಮಾಡಿದಂಥ ಸಂದರ್ಭದಲ್ಲಿ ಆ ಗ್ರಾಮ ಸಭೆಗಳಲ್ಲಿ ತೀರ್ಮಾನವಾಗುತ್ತದೆ. ಗ್ರಾಮ ಸಭೆಗಳ ಎದುರಿನಲ್ಲಿಯೇ ಹಣ ಖರ್ಚು ಮಾಡಿದ್ದಕ್ಕೆ ಲೆಕ್ಕ ಕೊಡಬೇಕಾದಂಥ ಪ್ರಸಂಗ ಬರುತ್ತಿರುವುದರಿಂದ ಗ್ರಾಮದ ಎದುರಿಗೆ ಅಲ್ಲಿ ನಡೆದಿರುವಂಥ ಅವ್ಯವಹಾರವನ್ನು ಗುರುತಿಸಿ ಜನ ಅವರನ್ನು ದಂಡಿಸಬಹುದೆನ್ನುವ ಅರ್ಥದಿಂದ ನಾವು ಮಾಡಿದ್ದೆವು. ಆದರೆ ಏನಾಗಿದೆಯೆಂದರೆ ಗ್ರಾಮ ಸಭೆಗಳಲ್ಲಿ, ಗ್ರಾಮ ಪಂಚಾಯಿತಿಗಳಲ್ಲಿ ಅವರಿಗೆ ಕೊಟ್ಟಿರುವ ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರದಿಂದ ಬಳಸಿಕೊಳ್ಳುತ್ತಿರುವುದರಿಂದ ಸಮಸ್ಯೆಯಾಗಿದೆಯೆಂದು ಕೆಲವು ಕಡೆ ನಮ್ಮ ಅನುಭವಕ್ಕೆ ಬಂದಿದೆ. ನಾನು ಸಾವಿರಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿಗಳ ಮೇಲೆ ವಿಚಾರಣೆಗೆ ಆಜ್ಞೆ ಮಾಡಿದ್ದೇನೆ. ವಿಚಾರಣೆಯೂ ನಡೆಯುತ್ತಿದೆ. ಇದನ್ನು ನಾವು ತಹಬಂದಿಗೆ ತರಬೇಕಾದ ಸಂದರ್ಭದಲ್ಲಿ ನಾವು ಅಧಿಕಾರ ಹಾಗೂ ಹಣ ಕೊಡುವುದರ ಜೊತೆಗೆ ಅಧಿಕಾರಿಗಳನ್ನು ಕೊಡಬೇಕಾಗಿತ್ತು ಮತ್ತು accountabilityಗೆ

ಬೇಕಾದಂಥ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಆ ವ್ಯವಸ್ಥೆಯ ಲೋಪದೋಷಗಳಿಂದ ಇವತ್ತು ನಾವು, ನೀವು ನಿರೀಕ್ಷೆ ಮಾಡಿದಂಥ ಪ್ರಗತಿಯಾಗಿಲ್ಲವೆನ್ನುವುದು ನಮ್ಮೆಲ್ಲರ ಗಮನಕ್ಕೆ ಬರುತ್ತಿರಬೇಕಾದಾಗ ಕೆಲವಾದರೂ ಗೈಡ್‌ಲೈನ್ಸ್‌ಗಳನ್ನು ಕೊಡದೇ ಕೆಲಸ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದು ತಪ್ಪಾಗಿದೆ ಮತ್ತು ಕಾಲಕಾಲಕ್ಕೆ ಅಲ್ಲಿ inspection ಮಾಡಿ ದಂಡಿಸಬೇಕಾದಂಥ ಕೆಲಸ ಮಾಡದಿದ್ದುದರಿಂದ ಮತ್ತು ಅಲ್ಲಿ ಅಧಿಕಾರಿಗಳು ಯಾವ ಮಟ್ಟದವರು ಇರಬೇಕಾಗಿತ್ತು ಅವರನ್ನು ನೇಮಕ ಮಾಡದಿರುವುದರಿಂದ ತೊಂದರೆಯಾಗಿದೆ. ಅತಿ ಶೀಘ್ರದಲ್ಲಿ ಇದಕ್ಕೆ ನಾನು ವ್ಯವಸ್ಥೆಯನ್ನು ಮಾಡುವುದರ ಜೊತೆಗೆ, ಇವತ್ತು ವಿಜಿಲೆನ್ಸ್ ಕಮಿಟಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕಾದುದು ಕೂಡ ಅವಶ್ಯವಿದೆಯೆಂದು ನಾನು ಭಾವಿಸಿಕೊಂಡಿದ್ದೇನೆ. ಆ ಹೆಚ್ಚಿನ ಅಧಿಕಾರವನ್ನು ಕೊಟ್ಟು ತಿದ್ದುಪಡಿಯನ್ನು ತರಬೇಕಾದುದು ಅವಶ್ಯವಿದೆ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಶ್ರೀರಾಮರೆಡ್ಡಿಯವರು ಮೊದಲು ಮಾತನಾಡಿ ಮುಗಿಸಲಿ,

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈಗ ಸೆಕ್ಷನ್ 184 ರಲ್ಲಿ ಇವರು ರೂಲ್ಸ್ ಮಾಡಿ ಕಳುಹಿಸಿದರೆ ಹೈಕೋರ್ಟ್‌ನಲ್ಲಿ ಏನು ಮಾಡುತ್ತಾರೆ, ಕೇಳಿ. ಇವರು ಏನೆಲ್ಲಾ ಆದೇಶ ಮಾಡಿದರೂ ಅದು ಹೈಕೋರ್ಟ್‌ನಲ್ಲಿ stay ಆಗುತ್ತದೆ. ಸೆಕ್ಷನ್ 184 ಕಳುಹಿಸಿದ್ದಕ್ಕೆ ಏನಾಯಿತು ಮಾನ್ಯ ಉದಾಸಿಯವರೇ. ಹೈಕೋರ್ಟ್‌ನಲ್ಲಿ stay ಆಯಿತು. ಆಶ್ರಯದ್ದೇನಾಯಿತು, ಅದು ಸ್ಟೇ ಆಯಿತು. ಎಲ್ಲಾ ಇವರು ಕಳುಹಿಸಿದ್ದೆಲ್ಲಾ stay ಆಗುತ್ತದೆ. ಏನು ಮಾಡುತ್ತೀರಿ ನೀವು. ತಿದ್ದುಪಡಿ ಮಾಡಬೇಕು.

ಶ್ರೀ ಸಿದ್ದು ಸವದಿ: ಇವರೇನು ಬೇಲೂರು ಘೋಷಣೆ ಮಾಡಿದ್ದಾರೆ, ಎಲ್ಲೆಲ್ಲಿ ಅನ್ಯಾಯವಾಗುತ್ತಿದೆ, ಎಲ್ಲಿ ಕಾನೂನು ವಿರುದ್ಧವಾಗಿ ಆಗುತ್ತಿದೆ, ಅದಕ್ಕೆ ತಿದ್ದುಪಡಿ ಮಾಡಿ. ಆ ಬೇಲೂರು ಘೋಷಣೆ ದೊಡ್ಡ ಇಂಟರ್‌ನ್ಯಾಷನಲ್ ಕೋರ್ಟ್‌ನ ಆಜ್ಞೆ ಅಲ್ಲ ಅದು.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉದಾಸಿಯವರು ಪಂಚಾಯತ್‌ನಲ್ಲಿ ಏನು ಅಧಿಕಾರವನ್ನು ಕೊಟ್ಟಿದ್ದೇವೆ ಅದನ್ನು ಬಹಳ ಸ್ವೇಚ್ಛಾಚಾರವಾಗಿ ಉಪಯೋಗಿಸಿಕೊಂಡು ದುರುಪಯೋಗ ಬಹಳ ಆಗುತ್ತಿದೆ ಎಂದು ಒಂದು ಮಾತು ಹೇಳಿದರು. ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಅದಕ್ಕೆ ಕಡಿವಾಣ ಹಾಕಲಿಕ್ಕೆಂದೇ ಶ್ರೀ ಬಸವರಾಜ ಹೊರಟ್ಟಿಯವರು ಆರ್.ಡಿ.ಪಿ.ಆರ್.

ಮಂತ್ರಿಗಳಾಗಿದ್ದಾಗ 10,000 ಕ್ಕಿಂತ ಹೆಚ್ಚು ಯಾವ್ಯಾವ ಕಾಮಗಾರಿಗಳಿದ್ದರೂ ಟೆಂಡರ್ ಕರೆದೇ ಮಾಡಬೇಕೆಂದು ಅವರು ಒಂದು ಡೈರೆಕ್ಷನ್ಸ್ ಕಳುಹಿಸಿದ್ದರು. ನೀವು ಮಂತ್ರಿಗಳಾಗಿ ಬಂದ ಕೂಡಲೇ ಆ ಡೈರೆಕ್ಷನ್ಸ್ ಅನ್ನು ವಿತ್‌ಡ್ರಾ ಮಾಡಿದ್ದೀರಿ. ಏತಕ್ಕೆ ಮಾಡಿದಿರಿ? ಹೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಲೋಪವಿರುವುದು ಎಲ್ಲಿ ಎಂದರೆ ಕ್ರಿಯಾ ಯೋಜನೆಯನ್ನು ತಯಾರು ಮಾಡುವುದರಲ್ಲಿ ಇರತಕ್ಕಂಥ ದೋಷವನ್ನು ನೀವು ಸರಿಪಡಿಸದೆ ಹೋದರೆ ಇದನ್ನು ತಡೆಗಟ್ಟಲಿಕ್ಕೆ ಸಾಧ್ಯವಿಲ್ಲ. ನಿಮ್ಮ ವಿಜಿಲೆನ್ಸ್ ಕಮಿಟಿಯ ಸದಸ್ಯರು ಯಾರು? Z.P members ಒಬ್ಬ ಸದಸ್ಯರು. ನಾನು ಅಧ್ಯಕ್ಷ. Z.P. member ಕ್ರಿಯಾ ಯೋಜನೆಯನ್ನು ರೂಪಿಸಿ ಪಟ್ಟಿಯನ್ನು ಕೊಟ್ಟಿರುತ್ತಾರೆ. ವಿಜಿಲೆನ್ಸ್ ಕಮಿಟಿಯಲ್ಲಿ ನಾನು ಛೇರ್ಮನ್ ಆಗಿ ಟಿಕ್ ಮಾರ್ಕ್ ಹಾಕಿದರೆ, ನಾನು ಕೊಟ್ಟಿರುವುದು ಆ ಕೆಲಸ, ನೀವು ಹೇಗೆ ಟಿಕ್ ಮಾರ್ಕ್ ಹಾಕುತ್ತೀರಿ ಎಂದು ಕೇಳುತ್ತಾರೆ. ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಅದರಲ್ಲಿ ಸದಸ್ಯರು. ಎಲ್ಲರನ್ನು ಸದಸ್ಯರನ್ನಾಗಿ ಮಾಡಿ ಜಾತ್ರೆ ಮಾಡಿಬಿಟ್ಟು ಕ್ರಮ ತೆಗೆದುಕೊಳ್ಳಿ ಎಂದು, ಮಾನ್ಯ ಜ್ಞಾನೇಂದ್ರ ಅವರು ನಮಗೆ ಇಲ್ಲಿ ಉಪದೇಶ ಮಾಡುತ್ತಿದ್ದಾರೆ. ಅರ್ಥ ಆಯಿತಲ್ಲಾ.

ಶ್ರೀ ಸಿದ್ದು ಸವದಿ: ನಿರ್ದಿಷ್ಟವಾದ ಗೈಡ್‌ಲೈನ್ಸ್ ಇದ್ದರೂ ಸಹಿತ 12th Finance Commission ಮತ್ತು CMGSY ಈ ಆಸ್ಫಾಲ್ಟಿಂಗ್ ರಸ್ತೆಗಳನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ನಿರ್ದೇಶನ ಇದ್ದರೂ ಸಹಿತ 50,000–00,. 1,00,000–00 ಲಕ್ಷ ರೂ.ಗಳ ಹೊಸ ರಸ್ತೆಗಳನ್ನು ಮಾಡುವ ಮುಖಾಂತರ, ಯಾವುದೇ ರೀತಿಯ ಕ್ಷೇತ್ರ, ತಾಲ್ಲೂಕಿನಲ್ಲಿ ರಸ್ತೆ ಅಭಿವೃದ್ಧಿಯಾಗುತ್ತಿಲ್ಲ. ಅದರ ಬಗ್ಗೆಯೂ ಸಹ ವಿಶೇಷವಾಗಿ ಗಮನವಹಿಸಿ, ಆಸ್ಫಾಲ್ಟ್ ರಸ್ತೆಯನ್ನು ರಿಪೇರಿ ಮಾಡುವುದಕ್ಕೆ 12th Finance Commissionನಲ್ಲಿ ಅಥವಾ ಸಿ.ಎಂ. ಜಿ.ಎಸ್.ವೈ. ನಲ್ಲಿ ಅವರೇ ಮಾಡಲಿ. ಆದರೆ ನಿಯಮದ ಪ್ರಕಾರ ತೆಗೆದುಕೊಳ್ಳಲಿ. ಅಲ್ಲಿ ಯಾವ ಒಳ್ಳೆಯ ರಸ್ತೆಗಳು ದುರಸ್ತಿಯಾಗುತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಇದು ಬಹಳ ಗಹನವಾದ ವಿಚಾರ. ಮಾರ್ಚ್‌ನೊಳಗೆ ನಾವು ಒಂದು ಕ್ಷೇತ್ರಕ್ಕೆ 60.00 ರಿಂದ 65.00 ಲಕ್ಷ ರೂ.ಗಳನ್ನು 12th Finance Commission ಗೆ ಖರ್ಚು ಮಾಡಬೇಕಾಗಿದೆ. ಇವರು ಆದೇಶ ಕೊಟ್ಟರು, ಕೋರ್ಟ್ ತೀರ್ಮಾನ ಕೊಟ್ಟರು, ಅವರಿಗೆ ಆದೇಶ ಕೊಡಲಿಕ್ಕೆ ಅವರಿಗೆ ಅಧಿಕಾರವಿದೆ. ಒಂದೇ ಒಂದು ಮಾತು ಇತ್ತು. While doing that public importance ಅನ್ನು ಗಮನದಲ್ಲಿಟ್ಟುಕೊಂಡು ಮಾಡಿ. We

cannot prevent M.L.A.s prioritizing the list ಎಂದು ಹೇಳಿದ್ದನ್ನು, ಇವರು ಸೆಕ್ರೆಟರಿ, ಸಿ.ಇ.ಓ. ಗಳು ಅದರರ್ಥ 50% ಜಿಲ್ಲಾ ಪರಿಷತ್ ಸದಸ್ಯರು, 50% ಎಂ.ಎಲ್.ಎ.ಗಳು ಮಾಡಬೇಕು ಎಂದು ವ್ಯಾಖ್ಯಾನ ಮಾಡಿ ಇವರ ಆದೇಶಕ್ಕೆ ವಿರುದ್ಧವಾಗಿ ರೆಸಲ್ಯೂಷನ್ ಮಾಡಿ ಇವರು ಹೀಗೆ ಕೆಡಿಸುತ್ತಿದ್ದಾರೆ, ಅದಕ್ಕೆ ನಾನು ಇಷ್ಟೊಂದು ಮಾತನಾಡುತ್ತಿದ್ದೇನೆ. ಇದೇನು ಸರ್ಕಾರವಾಗಿ ಉಳಿದಿದೆಯೇ ಎಂದು. See when you give a direction, Sec. 15-84 ರ ಕೆಳಗೆ ನೀವು ಡೈರೆಕ್ಷನ್ಸ್ ಕೊಟ್ಟರೆ, ನಿಮ್ಮ ಸಿ.ಇ.ಓ. ಹೇಗೆ ತುಮಕೂರಿನಿಂದ, ಕೋಲಾರದಿಂದ ರೆಸಲ್ಯುಷನ್ ಮಾಡಿ ಕಳುಹಿಸುತ್ತಾರೆ? Is he there to follow your direction or directions of those members? ಹಾಗಾದರೆ ನೀವು ಬೆಳಗಾಂ ಅನ್ನು ಏಕೆ ಸೂಪರ್‌ಸೀಡ್ ಮಾಡಲಿಕ್ಕೆ ಹೋದಿರಿ? You have to supersede all these institutions. ಏನು ಮಾಡಿದಿರಿ, ಇವತ್ತಿನವರೆಗೆ ನಮ್ಮ ತುಮಕೂರು ಜಿಲ್ಲೆಯ ಒಂದು ರೂಪಾಯಿ ಕೆಲಸ ಆಗಿಲ್ಲ. ಯಾವಾಗ ಕೆಲಸ ಮಾಡುತ್ತೀರಿ ನೀವು? It is for maintenance of roads, ಹೊಸ ರೋಡ್ಸ್ ಮಾಡುವ ಹಾಗಿಲ್ಲ. ಇಂಜಿನಿಯರ್ ಮಾಡಿದ್ದನ್ನು ಪ್ರಯಾರಿಟಿ ಮಾಡಲಿಕ್ಕೆ ನಮಗೆ ಕೊಟ್ಟಿರುವುದು. ಎರಡನೆಯದು 3054 ರದ್ದು ಮಾಡಿದಿರಿ. ಸಿ.ಎಂ.ಜಿ.ಎಸ್.ವೈ. ಎಂದು ಇಲ್ಲಿ ಅನೌನ್ಸ್ ಮಾಡಿದಿರಿ. ಯಾರು ಮಾಡಬೇಕು 3054ರ ಕೆಲಸ? ಜಿಲ್ಲಾ ಪರಿಷತ್ ಮಾಡಬೇಕೇ? ಇವರು ಮಾಡಬೇಕೇ? ಯಾರೋ ಒಬ್ಬರು ನಿಮ್ಮ ಅಧಿಕಾರಿ ಲಿಂಕ್ ಡಾಕ್ಯುಮೆಂಟ್‌ಗೆ, ಆ ರೋಡ್ ಮೇಲೆ ಬರೆದ ಎಂದು ಇವತ್ತಿನವರೆಗೂ 3054 ನ ಒಂದು ರೋಡ್ ಮೆಂಟೇನ್ ಆಗಿಲ್ಲ. ನೀವು ಆ ಗ್ರಾಮೀಣ ಪ್ರದೇಶದಿಂದ ಬರುತ್ತೀರಿ. ಯಾವುದೇ ಜಿಲ್ಲಾ ಮುಖ್ಯ ರಸ್ತೆಯನ್ನು ರಿಪೇರಿ ಮಾಡಲಿಕ್ಕೆ ಮೆನ್‌ಟೇನ್ ಮಾಡಲಿಕ್ಕಾಗದಂಥ ದುಸ್ಥಿತಿ ಇಲ್ಲಿ ಡಿಸೆಂಟ್ರಲೈಸೇಷನ್ ಹೆಸರಿನಲ್ಲಿ ತಂದಿಟ್ಟಿದ್ದೀರಿ. ಎಲ್ಲಿ ಖರ್ಚು ಮಾಡಿಸಿದ್ದೀರಿ? ರಿಪೇರಿ ಆಗಿದೆಯೇ? ಒಡೆದು ಹೋದರೆ ಸೇತುವೆ ರಿಪೇರಿ ಆಗಿದೆಯೇ? ಗುಂಡಿ ಬಿದ್ದಿರುವ ರಸ್ತೆ ರಿಪೇರಿ ಮಾಡಿದ್ದಾರೆಯೇ? ಯಾವತ್ತಾದರೂ ಚರ್ಚೆಯಾಗಿತ್ತೇ? ಮಾನ್ಯ ರಾಜಣ್ಣನವರೇ ಇಲ್ಲಿ. ತೆಗೆಯಿರಿ ಸರ್ ಲಿಂಕ್ ಡಾಕ್ಯುಮೆಂಟಿನಿಂದ, ಎಂದು ನೂರು ಸಾರಿ ಕೇಳಿದ್ದೇವೆ. ಸುಮ್ಮನೆ ಆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ಆ ರೋಡ್ ಸೇರಿಸಿದ ಒಂದು ಅಪರಾಧಕ್ಕೆ ಹಳ್ಳಿಗಳಲ್ಲಿ ಯಾರು ಓಡಾಡಬಾರದೇ? 3054 ಗ್ರಾಂಟ್ ತೆಗೆದು ನೀವು ತೋಟಕ್ಕೆ, ಹೊಲಗಳಿಗೆ, ಮನೆ ಹತ್ತಿರ ರೋಡ್‌ಗಳನ್ನು ಮಾಡಿಕೊಳ್ಳುವ ಸ್ಥಿತಿ ನಿರ್ಮಾಣ ಮಾಡಿದ್ದೀರಿ.

ಶ್ರೀ ಸಿ.ಎಂ. ಉದಾಸಿ: ಈಗ 120 ಕೋಟಿ ರೂ.ಗಳಷ್ಟು ಹಣವನ್ನು 3054 ರಲ್ಲಿ ಮೆಂಟೇನೆನ್ಸ್ ಸಲುವಾಗಿ ಬಿಡುಗಡೆ ಮಾಡಿರುವುದು ಸಹಿತ ತಾವು ಕೊಟ್ಟಿರುವ ಸಲಹೆ ಸೂಚನೆಗಳನ್ನು, ಮಾರ್ಗದರ್ಶನಗಳ ಮೇರೆಗೆ ಕೊಟ್ಟಿದ್ದೇವೆ. ಅದನ್ನು ಮೀರಿ ಕೆಲವು ಕಡೆಯಲ್ಲಿ ಕೆಲಸ ಮಾಡುತ್ತಿದ್ದಾರೆಂಬುದು ನಮ್ಮ ಗಮನಕ್ಕೆ ಬಂದಿದೆ. ಸೂಚನೆಯನ್ನು ಕೊಡುತ್ತಿದ್ದೇವೆ. ತಾವು ಹೇಳುತ್ತಿರುವ 12th Finance Commission ನ ವಿಚಾರದಲ್ಲಿ ನಾವು ಕೊಟ್ಟಿರುವಂಥ ಗೈಡ್‌ಲೈನ್ಸ್ ಅನ್ನು ಮೀರಿ ಮಾಡಿರುವಂಥದ್ದನ್ನು ವಾಪಸ್ಸು ಅವರಿಗೆ ಮಂಜೂರಾತಿ ಕೊಡಲಿಕ್ಕಾಗುವುದಿಲ್ಲವೆಂದು ನಿರಾಕರಣೆ ಮಾಡಿ ಕಳುಹಿಸಿದ್ದೇವೆ. ಮೂರು ಜಿಲ್ಲೆಗಳಲ್ಲಿ ಈ ರೀತಿ ಸಮಸ್ಯೆಯಿದೆ. ಆ ಮೂರು ಜಿಲ್ಲೆಗಳ ಸಮಸ್ಯೆಯೂ ಪರಿಹಾರವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಇದರಲ್ಲಿ ತಮ್ಮ ಜಿಲ್ಲೆಯೂ ಇದೆಯೆಂದು ಹೇಳಲಿಕ್ಕೆ ನಾನು ಬಯಸುತ್ತೇನೆ. ಬಾಗಲಕೋಟೆ ಜಿಲ್ಲೆಯೂ ಸಹ ಇದರಲ್ಲಿದೆಯೆಂದು ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮ ಗಮನಕ್ಕೆ ಬಂದಿದ್ದನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳಬೇಡಿ. ನಾವು ಜನಪ್ರತಿನಿಧಿಗಳು, ನಮ್ಮ ಗಮನಕ್ಕೂ ಬಂದಿದೆ.

ಶ್ರೀ ಬಿ. ಶಿವರಾಂ: ನಾನು ಸಹ ಒಂದು ಪತ್ರ ಬರೆದಿದ್ದೇನೆ, ಕಾರ್ಯದರ್ಶಿಗಳಿಗೆ ನಮ್ಮ ಜಿಲ್ಲೆಯಲ್ಲಿ ಏನಾಗಿದೆ ಅಂದರೆ, ಶಾಸಕರ ಪಟ್ಟಿಯನ್ನು ಪರಿಗಣಿಸುವುದಕ್ಕೆ ಅವಕಾಶವಿಲ್ಲ. ಜಿಲ್ಲಾ ಪಂಚಾಯತಿಯಲ್ಲಿ ರೆಸಲ್ಯೂಷನ್‌ಗೆ ಇಟ್ಟರಂತೆ, ಮಾಡಲಿಲ್ಲವಂತೆ ನಿಮಗೆ ಅವರು ಕಾಗದ ಬರೆದಿದ್ದಾರೆ.

ಶ್ರೀ ಶಿವರಾಮ್: ನಾನು ಇಲಾಖೆ ಕಾರ್ಯದರ್ಶಿಗಳಿಗೆ, ನಿಮಗೆ ಕಾಗದ ಬರೆದಿದ್ದೇನೆ. ಹಾಸನ ಜಿಲ್ಲೆಯಲ್ಲಿ ಶಾಸಕರ ಪಟ್ಟಿಯನ್ನೂ ಪರಿಗಣಿಸುವುದಿಲ್ಲ. ಜಿಲ್ಲಾ ಪಂಚಾಯ್ತಿಯವರು ನಿಮಗೆ ಕಾಗದ ಬರೆದಿದ್ದಾರೆ. ನಾನು ನಿಮ್ಮ ನಿರ್ದೇಶಕರಿಗೆ ಫೋನ್ ಮಾಡಿ ಹೇಳಿದೆ. ಇಲ್ಲಿವರೆಗೆ ಚಕಾರದ ಉತ್ತರ ಕೂಡ ಬಂದಿಲ್ಲ. ನೀವು ಮೂರು ಮಾತ್ರ ಬಂದಿದೆ ಅಂತ ಹೇಳ್ತೀರಲ್ಲ, ನಮ್ಮ ಹಾಸನ ಜಿಲ್ಲೆಯದು ನಿಮಗೆ ಬರುವುದೇ ಇಲ್ಲವೇ? ಕನಿಷ್ಠ 25% ಕೊಡಲಿಲ್ಲ, ನಾನು ಪಟ್ಟಿಯನ್ನು ನಿಮ್ಮ ಕಡೆಯಿಂದ ಬರೆದು ಕಳಿಸಿದ್ದೆ. ಆ ಪಟ್ಟಿಯನ್ನು ಮೀಟಿಂಗ್ ನಲ್ಲಿಟ್ಟು ಆಗಲಿಲ್ಲ ಅಂತ ನಿಮ್ಮ ಸಿಇಓ ನಿಮಗೇ ವಾಪಸ್ ಕಳಿಸಿದ್ದಾರೆ.

ಶ್ರೀ ಸಿ.ಎಂ. ಉದಾಸಿ: ನಾವು ಕೆಲವು ಬದಲಾವಣೆಗಳನ್ನು ತರದೇ ಇದ್ದರೆ ಮಾಲ್ ಪ್ರಾಕ್ಟೀಸೇ, ಪ್ರಾಕ್ಟೀಸ್ ಎಂದು ಆಗಿಬಿಡುತ್ತದೆ. ಇದನ್ನೆಲ್ಲ ಗಮನಿಸಬೇಕಾಗಿದೆ. ಕೆಲವು ಕಡೆಯಲ್ಲಿ ಏನಾಗಿದೆ. ಸ್ವೇಚ್ಛಾಚಾರದಲ್ಲಿ ಮೆಂಬರ್ಸ್

ಹಂಚಿಕೊಳ್ಳುವುದನ್ನು ಕೈಬಿಡಬೇಕು. ಆದ್ಯತಾಪಟ್ಟಿ ಗುರುತಿಸಬೇಕು. ನಾವು ಕೊಟ್ಟಿರುವ ಗೈಡ್‌ಲೈನ್ಸ್ ಮೀರಿ ಅಲ್ಲಿ ಕೆಲಸವಾಗುತ್ತಿದ್ದರೆ ಅದನ್ನು ತಡೆಹಿಡಿಯಲು ಬೇಕಾದ ಕೆಲವು ಮಾರ್ಗಸೂಚಿಗಳನ್ನು ಮಾಡಲೇಬೇಕಾಗಿದೆ. ಕಾನೂನಿನಲ್ಲಿ ತಿದ್ದುಪಡಿ ತರಲೇಬೇಕಾಗುತ್ತದೆ. ತಾವು ಸಲಹೆ ಮಾಡಿದ ತಿದ್ದುಪಡಿ ಅವಶ್ಯಕತೆಯಿದೆಯೆಂದು ನನ್ನ ಗಮನಕ್ಕೆ ಬಂದಿದೆ. ಇದನ್ನೆಲ್ಲ ಚರ್ಚೆ ಮಾಡಿ ಪ್ರಸ್ತಾವನೆ ಮಂಡಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾನು ಬರಗಾಲದ ಬಗ್ಗೆ ಇಷ್ಟೇ ಹೇಳುತ್ತಿರುವುದು, ನಿಮಗೆ ಯಾವುದೇ ಕಾರ್ಯಕ್ರಮಗಳಿಲ್ಲ, ಈ ಸಲವೂ ಕುಡಿಯುವ ನೀರಿನ ಸಮಸ್ಯೆ ತಲೆದೋರುವುದು. ಮೂರನೆಯದು, ಮಾರ್ಗದರ್ಶಿಕೆಗಳ ದುರುಪಯೋಗವನ್ನು ತಡೆಗಟ್ಟಲಿಕ್ಕೆ ಇವರಿಗೆ ಶಕ್ತಿಯಿಲ್ಲ. ಅಧಿಕಾರ ವಿಕೇಂದ್ರೀಕರಣದ ಹೆಸರನ್ನು ಮುಂದೆ ಇಟ್ಟುಕೊಂಡು ಇವತ್ತು ಇಡೀ ರಾಜ್ಯದ ಹಣ ಲೂಟಿ ಹೊಡೀಲಿಕ್ಕೆ ಅವಕಾಶ ಕೊಡುತ್ತಿದ್ದಾರೆ. ಅರಾಜಕತೆ ನಿರ್ಮಾಣವಾಗಿಬಿಟ್ಟಿದೆ, ಹಳ್ಳಿಗಳಲ್ಲಿ. ಅದು ನಿಮ್ಮ ಗಮನಕ್ಕೆ ಬಂದಿಲ್ಲ. ಇವತ್ತು ಒಂದೊಂದು ತಾಲ್ಲೂಕಿನಲ್ಲಿ ಐದು ಸಾವಿರ ಕಂಟ್ರಾಕ್ಟರ್ಸ್ ಬಂದಿದ್ದಾರೆ. ನಾಳೆ ಪ್ರತಿ ಮತದಾರನೂ ಕಂಟ್ರಾಕ್ಟ್ ಕೆಲಸ ಕೇಳಲು ಬರುತ್ತಾನೆ. ಸ್ವಾಮಿ "ನಮ್ಮ ಮಗಳ ಮದುವೆಯಿದೆ ಒಂದು ಕೆಲಸ ಕೊಡಿ, ನಾವು ಕಷ್ಟದಲ್ಲಿದ್ದೇವೆ ಕಂಟ್ರಾಕ್ಟ್ ಕೊಡಿ" ಅಂತ ಬರುತ್ತಾರೆ, ಏನಿದರ ಅರ್ಥವೇನು ಹೇಳಿ? ಒಂದು ಕಂಟ್ರಾಕ್ಟ್ ಕೊಡಿ, ದೇವಸ್ಥಾನ ಕಟ್ಟಿ ಕೊಳ್ಳುತ್ತೇವೆ ಅನ್ನುತ್ತಾರೆ. ಯಾವ ಬಾವಿಗೆ ಧುಮುಕುವುದು ಸ್ವಾಮಿ? ಎಲ್ಲ ಕಡೆ ಹೀಗೇ ಇದೆ. ಏನು ಮಾಡಬೇಕು ಹೇಳಿ ನೀವು? ಐದೈದು ಸಾವಿರಕ್ಕೂ ಕಂಟ್ರಾಕ್ಟ್ ಕೆಲಸ ಕಲಿಸಿಬಿಟ್ಟು ಇವರೆಲ್ಲರಿಗೂ ಸಾಮಾನ್ಯ ಜನರ ತಲೆಗೆ ಏನು ಬಂದಿದೆ ಅಂದರೆ ಕಂಟ್ರಾಕ್ಟ್ ಕೆಲಸ ಅಂದರೆ ಲೂಟಿ ಹೊಡೆಯುವುದು ಅಂತ ಅರ್ಥ. ಕೆಲಸವಾಗಬೇಕಾಗಿಲ್ಲ. ಇದನ್ನು ನಾವೇನಾದರೂ ಈಗ ತಡೆಹಿಡಿಯದೇ ಹೋದರೆ, ಈ ರಾಜ್ಯ ಖಂಡಿತವಾಗಿ ಉಳಿಯುವುದಿಲ್ಲ. ರಾಜ್ಯ ಅಭಿವೃದ್ಧಿಯಾಗದೇ ಸಂಪೂರ್ಣ ನಾಶವಾಗುತ್ತದೆ. ನೀವು ಇದನ್ನು ಕಾಪಾಡುವುದಕ್ಕೆ ಆಗುವುದಿಲ್ಲ. ನಿಮಗೆ ಬರಗಾಲ ಎದುರಿಸಬೇಕೆಂದು ಇಚ್ಛೆ ಇದ್ದರೆ ಮೊದಲು ನೀವು ಟಾಸ್ಕ್ ಫೋರ್ಸನ್ನು ಕಂಟ್ರೋಲ್ ಮಾಡಿ. ಹಣ ಕೊಟ್ಟು ಅಸೆಟ್ಸ್ ಕ್ರಿಯೇಟ್ ಮಾಡಿ, ಕಠಿಣ ಮಾರ್ಗದರ್ಶಿಗಳನ್ನು ಎನ್ಫೋರ್ಸ ಮಾಡಿ. ಇಲ್ಲವೆಂದರೆ ಬರಗಾಲ ಎದುರಿಸಲು ಆಗುವುದಿಲ್ಲ. ರೈತರಿಗೆ ಬೆಳೆ ನಷ್ಟವಾಗಿದೆ, ತಕ್ಷಣ ನೀವು ಪರಿಹಾರ ಘೋಷಣೆ

ಮಾಡಿ. ಮಾನ್ಯ ಜಗದೀಶ ಶೆಟ್ಟರೆ, ನೀವು ಉತ್ತರಿಸುವಾಗ ರೈತರ ಬೆಳೆ ನಷ್ಟಕ್ಕೆ ಪರಿಹಾರ ಘೋಷಣೆ ಮಾಡಲೇಬೇಕು.

ಶ್ರೀ ಮಾಧುಸ್ವಾಮಿ: ಅಲ್ಲಾ ಸಾರ್, ಬರ ಅಂತ ಡಿಕ್ಲೇರ್ ಮಾಡಿದ ತಕ್ಷಣ, ರೆಮಿಶನ್‌ಗೆ ಹಾಕಬೇಕಾಗಿತ್ತು. ಕಂದಾಯ ವಜಾ ಮಾಡಿದ ತಕ್ಷಣ ಆ ವರ್ಷದ ಕ್ರಾಪ್ ಲೋನನ್ನು ಇಂಟರೆಸ್ಟ್ ಕಟ್ಟಿಸಿಕೊಂಡು ಫ್ರೆಶ್ ಸಾಲ ರೈತರಿಗೆ ಕೊಡಬೇಕಾಗಿತ್ತು. ರಿಶೆಡ್ಯೂಲ್ ಮಾಡಬೇಕಾಗಿತ್ತು. ಇಲ್ಲವೆಂದರೆ ಯಾರು ಇದನ್ನೆಲ್ಲ ಮಾಡುವವರು? ಈಗ ಫೆಬ್ರವರಿ, ಎಲ್ಲ ವಿಎಸ್ಎಸ್ಎನ್ ಅನ್ನೋ ಈಗ ಡಿಮಾರ್ಂಡ್ ಮಾಡುತ್ತಾರೆ. ನೀವು ಹೇಳಬೇಕಲ್ಲ ಅವರಿಗೆ, ತಗೋಬೇಡಿ ಪ್ರಿನ್ಸಿಪಲ್ಲನ್ನು ತೆಗೆದುಕೊಳ್ಳಬೇಡಿ ಅಂತ.

ಶ್ರೀ ಶ್ರೀರಾಮರೆಡ್ಡಿ: ನಾನು ಮತ್ತೆ ಒತ್ತಾಯ ಮಾಡುತ್ತೇನೆ: ಇವರು ಬೆಳೆ ನಷ್ಟಕ್ಕೆ ಪರಿಹಾರ ಘೋಷಣೆ ಮಾಡಲೇಬೇಕು, ಹಣ ಬಿಡುಗಡೆ ಮಾಡಲೇಬೇಕು. ಸಾಲ ವಸೂಲಾತಿಯನ್ನು ಮುಂದೂಡಬೇಕು. ಅವರಿಗೆ ಹೊಸ ಸಾಲ ಕೊಡದೇಹೋದರೆ ಮುಂದಿನ ವರ್ಷ ಅವರು ಬದುಕಲು ಆಗುವುದಿಲ್ಲ. ಇನ್ನು ಕುಡಿಯುವ ನೀರು, ಇದು ಫೆಬ್ರವರಿ, ಏಪ್ರಿಲ್, ಮೇ, ಜೂನ್ ಗಳಲ್ಲಿ ನಮ್ಮ ಕುತ್ತಿಗೆಗೆ ಬರುತ್ತದೆ, ನಾವ್ಯಾರೂ ಕ್ಷೇತ್ರಗಳಲ್ಲಿ ಓಡಾಡುವಂತಿಲ್ಲ. ಜನ ಅಟ್ಟಿಸಿಕೊಂಡು ಬರುತ್ತಾರೆ. ಜಿಲ್ಲಾಧಿಕಾರಿಗಳು ಜಿಲ್ಲಾ ಪಂಚಾಯ್ತಿ ಮೇಲೆ, ಇವರು ಅವರ ಮೇಲೆ ಹಾಕಿ ತಪ್ಪಿಸಿಕೊಳ್ಳುವ ಕೆಲಸ ಮಾಡಬಾರದು. ಈಗಲೇ ಹಣ ಬಿಡುಗಡೆಗೆ ಏರ್ಪಾಡು ಮಾಡಿ. ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.): ಅಧ್ಯಕ್ಷರೇ, ಬರಗಾಲದ ಬಗ್ಗೆ ನಮ್ಮ ಹಿರಿಯ ನಾಯಕರೆಲ್ಲ ಮಾತನಾಡಿದ್ದಾರೆ. ಎರಡು ಅಥವಾ ಐದು ವರ್ಷಕ್ಕೊಂದು ಸಲ ಬರಗಾಲ ಬರುತ್ತಿದೆ. ನಮ್ಮ ಕೋಲಾರ ಜಿಲ್ಲೆ ಗತಿಯೇನಾಗಿದೆ ಅಂದರೆ ದಿನ ಬರಗಾಲವೇ. ವರ್ಷವೆಲ್ಲ ಬರಗಾಲವೇ. ಈಗ ನಾನು ಯಾವ ಬರಗಾಲದ ಬಗ್ಗೆ ಮಾತನಾಡುವುದು? ಅದು ಶಾಶ್ವತ ಬರಗಾಲ. ಬರಗಾಲವೆಂಬುದು ನಮಗಿಲ್ಲ, ಕರ್ನಾಟಕಕ್ಕಿಲ್ಲ, ಈ ಸಭೆಗೆ ಬಂದಿರುವ ದಾರಿದ್ರ್ಯ. ಬರಗಾಲದ ಬಗ್ಗೆ ಮಾತನಾಡುವವರು ಹಳ್ಳಿ ಕಡೆಯ ರೈತರಿಗೆ ಎಷ್ಟು ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಕುಡಿಯುವ ನೀರಿಗೇ ಯೋಗ್ಯತೆ ಇಲ್ಲ ನಮಗೆ, ಊಟಕ್ಕೇನು ಗತಿ? ಮೊದಲು ಕುಡಿಯಲು ನೀರು, ಆಮೇಲೆ ಊಟ ಮಾಡಲು ನೀರು, ಆಮೇಲೆ ಸ್ನಾನ ಮಾಡಲು ನೀರು, ಕಕ್ಕಸ್ ಹೋಗೋಕೆ ನೀರು. ನಾನು ಸುಮಾರು ಸಲ ಹೇಳಿದ್ದೇನೆ, ಇವತ್ತು ಬೆಳಿಗ್ಗೆಯೂ ನಮ್ಮ

ಇನ್ಚಾರ್ಜ್ ಸಚಿವರ ಹತ್ತಿರ ಮಾತನಾಡಿದೆ. What is the meaning of drought? ಮಂತ್ರಿಗಳು explain ಮಾಡಲಿ, ನಾನು ಕೂತುಕೊಳ್ಳುತ್ತೇನೆ. ಇದನ್ನು ತಮಾಷೆ ಮಾಡಿಕೊಂಡಿದ್ದಾರೆ. ಇವರು ಸಿಟಿ ಕಡೆ ಇಷ್ಟು, ಹಳ್ಳಿ ಕಡೆ ಇಷ್ಟು, preference ಕೊಡುತ್ತೇವೆ ಅಂತ ಪಟ್ಟಿ ಮಾಡಿಕೊಂಡಿದ್ದೀರಿ. ಉದಾಹರಣೆಗೆ ಹೇಳುತ್ತೇನೆ, ಮಾನ್ಯ ಉದಾಸಿ ಸಾಹೇಬರೇ, I do not have enmity with you. My love is there, but it is different love between you and me. ಅವರ ಆಫೀಸಿನಿಂದ ನನಗೊಂದು ಫೋನು, ಎಲ್ಲ ಶಾಸಕರಿಗೂ 25 ಲಕ್ಷ ಕೊಡಲಾಗುತ್ತಿದೆ, ತಾವು ಕೂಡಲೇ ಒಂದು ಪತ್ರ ನಮ್ಮ ಕಚೇರಿಗೆ ಕಳುಹಿಸಿಕೊಡಿ. ನಾನು ಆಸೆ ಇಟ್ಟುಕೊಂಡು ನಮ್ಮ ಇಂಜಿನಿಯರನ್ನು ಕರೆದು, ಒಂದು ಪಟ್ಟಿ ಮಾಡ್ರಿ ಅಂತ ಮಾಡಿಸಿ ತಂದು ಕೊಟ್ಟೆ. ಆಗ ಸಾಹೇಬರು "ಸಾರಿ ರಾಜೇಂದ್ರನ್ ನಿಮಗೆ ಬರುವುದಿಲ್ಲ" ಎಂದು ಹೇಳಿದರು. ಇದು, ಯಾತಕ್ಕೆ? ನಾನೇನು ಚಂದ್ರಮಂಡಲದಲ್ಲಿ ವಾಸ ಮಾಡುತ್ತಿದ್ದೇನೆ? ಇಲ್ಲಿಲ್ಲ ನಿಮಗೆ ಸಿಟಿಗೆ ಬರುವುದಿಲ್ಲ. On what basis you are giving 25 lakhs to rural areas? ಬರಗಾಲಕ್ಕೆಂದು ತಾನೇ ಕೊಡುತ್ತೀರಿ. ಹಳ್ಳಿ ಕಡೆಯವರೆಲ್ಲ ಬಹಳ ಸಂತೋಷದಿಂದಿರಲಿ ಅಂತ ಕೊಡುತ್ತಾರ? ಹಾಗಂತ ನನಗೆ ಕೊಡಲಿಲ್ಲ. ಸಾಹೇಬರದು ಕೆಲವು norms, rules ಇದೆ, ಇತಿಮಿತಿ ನೋಡಿ ಕೊಡುವವರು ಇವರೆಲ್ಲ? ನಾನು silent ಆಗಿಬಿಟ್ಟೆ. ಕುಡಿಯುವ ನೀರಿಗೆ DC ಹತ್ತಿರ KDP meeting ನಲ್ಲಿ ಕೇಳಿದರೆ, ನಮ್ಮ ಜಿಲ್ಲೆಗೆಂದು ಬಂದಿರುವುದು 10 ಲಕ್ಷ ಅಂದರು. ಜಿಲ್ಲೆಗೆ 10 ಲಕ್ಷ ಅಂದರೆ ನಮ್ಮ ಕ್ಷೇತ್ರಕ್ಕೇನು 10 ಸಾವಿರ ಕೊಡುತ್ತೀರ? Throwable glass, purchase ಮಾಡುವುದಕ್ಕಾಗುವುದಿಲ್ಲ ಸ್ವಾಮಿ. 10 ಲಕ್ಷದಲ್ಲಿ ನಾವು ಹಂಚಿಕೊಡುತ್ತೇವೆ ಅಂದರೆ, to whom we have to give complaint? ಕೊನೆಗೆ ನಮ್ಮ Revenue Ministerಗೆ ಬಂತು, ಅವರ ಮುಂದೆ ನಾನು ಕೇಳಿದೆ, ಇನ್ನೂ 40 ಲಕ್ಷ ಬೇಕು ನನಗೆ ಅಂತ. ಯಾರೂ ಬಾಯಿ ಓಪನೇ ಮಾಡುವುದಿಲ್ಲ, ಸುಮ್ಮನೆ ಇರುತ್ತಾರೆ. Revenue Minister ಹೇಳಬೇಕೋ, ಡಿಸಿ ಹೇಳಬೇಕೋ? ಹಾಗಿದ್ದರೆ ಸಭೆಗೆ ಯಾಕೆ ಕರೆದಿರಿ ನಮ್ಮನ್ನು? ನಮ್ಮನ್ನು ಮೀಟಿಂಗ್‌ಗೆ ಕರೆಯುವುದು ಹೇಗೆ? 12 ಗಂಟೆಗೆ ಇವತ್ತು ಮೀಟಿಂಗ್, Revenue Minister ಬರುತ್ತಾರೆ ಅಂತ. ನಾವು ನಮ್ಮ ಗಾಡಿಗೆ ಡೀಸೆಲ್ ಹಾಕಿಸಿಕೊಂಡು ಬರಬೇಕು, ಸರ್ಕಾರದ ಗಾಡಿಯಲ್ಲ ನಮ್ಮದು. ನಾವೇ drive ಮಾಡಿಕೊಂಡು ಬರಬೇಕು. Driverಗೆ ಸಂಬಳ ನಾವೇ ಕೊಡಬೇಕು. ಅವನು ಬಂದಿಲ್ಲ ಅಂದರೆ ನಾವೇ ಬರಬೇಕು. ಅಧಿಕಾರಿಗಳು ಏನು ಮಾಡುತ್ತಾರೆ? AC

car, red light, style DV ಬಂದು ಅಲ್ಲಿ ನಿಲ್ಲಿಸ್ತೀರಿ. ನಾವು ಜನರ ಮುಂದೆ ಹೋಗಬೇಕು ಬೀದಿ ಬೀದಿಗೆ. Corporation, Municipality elections ಬಂದರೆ, ತಾಯಿ ನಮಸ್ಕಾರ ಅಂದರೆ ನಮಗೆ ಉಗಿಯುತ್ತಾಳೆ "ಕುಡಿಯುವ ನೀರಿಗೆ ಇಲ್ಲಿಂದ 20 ಕಿ.ಮೀ. ಹೋಗುತ್ತಿದ್ದೇವೆ, ಇವನಿಗೆ ಮೊದಲು ಮತ ಹಾಕುತ್ತೀನ" ಅಂತ ನಮ್ಮನ್ನು ಬೈಯುತ್ತಾಳೆ. ನಾವು ಮಾನ ಮರ್ಯಾದೆ ಬಿಟ್ಟು ನಮಸ್ಕಾರ ಅನ್ನಬೇಕು. ಇಲ್ಲಿಗೆ ಬಂದು ಇವರನ್ನು ಕೇಳಿದರೆ, I will look into this. ಎಂದು ಹೇಳುತ್ತಾರೆ. Style ನೋಡಿ, ಕೇಳುವುದಕ್ಕೆ ಗಟ್ಸಿದೆಯಾ ನಿಮಗೆ? Who are they? What is the meaning of a Minister? You must have the capacity to command your officers. ಇವರು ಅವರನ್ನು ಹೇಗೆ ಕೇಳುತ್ತಾರೆಂದರೆ "ಪಾಪ ನಮ್ಮ ರಾಜೇಂದ್ರನ್ ಸುಮಾರು ಸಲ ಕೇಳುತ್ತಿದ್ದಾನೆ ಏನಾದರೂ ಹಣ ಇದೆಯಾ? What is your plan?`` With this, How you are going to run the show? ನಮಗೆ ತಾವು ಬರಗಾಲದ ಬಗ್ಗೆ ಮಾತನಾಡಿ ಎಂದು ಅವಕಾಶವನ್ನು ಮಾಡಿಕೊಡುತ್ತೀರಿ. ನಾನು ಇದುವರೆಗೂ ಮಾತನಾಡಿದ್ದೇನೆ, ನಾಳೆ ಹತ್ತು ಲಕ್ಷ ರೂಪಾಯಿಗಳನ್ನು release ಮಾಡುವುದಕ್ಕಾಗುತ್ತದೆಯೇ? ಈ ಸರ್ಕಾರಕ್ಕೆ ಇವರಿಗೆ ತಾಕತ್ತಿದೆಯೇ? Challenge ಮಾಡಲಿ. ಯಾವ ರೂಪದಲ್ಲಿ ಯಾವ ಮಂತ್ರಿಯಾದರೂ ನಾಳೆಯೇ ಹತ್ತು ಲಕ್ಷ ರೂಪಾಯಿಗಳನ್ನು ನಿಮ್ಮ ಕ್ಷೇತ್ರಕ್ಕೆ ಕೊಡುತ್ತೇನೆಂದು ತಾಕತ್ ಇದ್ದರೆ ಹೇಳಲಿ. ನಾನು ಕುಳಿತುಕೊಳ್ಳುತ್ತೇನೆ. ಹತ್ತು ಲಕ್ಷ ಕೊಡಲು ತಾಕತ್ ಇಲ್ಲ.

ಉಪಾಧ್ಯಕ್ಷರು: ಹೇಳುತ್ತಾರೇನೊ ನೋಡೋಣ.

ಶ್ರೀ ಎಸ್. ರಾಜೇಂದ್ರನ್: ಹೇಳಿ ಸ್ವಾಮಿ. ಇಷ್ಟು ಜನ ಮಂತ್ರಿಗಳಿದ್ದಾರೆ, ಹೇಳಲಿ ಸ್ವಾಮಿ. ಕೇವಲ ಹತ್ತು ಲಕ್ಷ ರೂಪಾಯಿಗಳನ್ನು ಕೊಡಿ ಸ್ವಾಮಿ. ಈ ಪರಿಸ್ಥಿತಿಯಲ್ಲಿ ನಾವು ಅಲ್ಲಿ ಬರೆದಿರುವುದೇನೆಂದರೆ 'ಸರ್ಕಾರದ ಕೆಲಸ ದೇವರ ಕೆಲಸ' ಏನು ಸ್ವಾಮಿ? Tall talk Himalayan liars ನಾವೆಲ್ಲ. "Rob Paul pay Peter." ಇದೇ ಸಭೆ. How you are going to run the show? ಆಮೇಲೆ ನಾವೆಲ್ಲ ಭಾಷಣ ಮಾಡುವುದು. ಪೇಪರ್ ನೋಡಿದರೆ ಬರೀ ಕೋಟಿಗಳೇ. ಬರೀ ಕೋಟಿಗಳೇ. ಇದಕ್ಕೆ ಇಷ್ಟು ಕೋಟಿ ಎಂದು ಹೇಳುವುದು. Silent ಆಗಿ ಆ ಮೀಡಿಯಾದವರೆಲ್ಲ ಏನು ಮಾಡಬೇಕೆಂದರೆ ಕೋಟಿಗಳೇ ಇಲ್ಲ, ಬರೀ ಕೇಡಿಗಳೇ ಎಂದು ಬರೆದುಬಿಡಬೇಕು. ಒಬ್ಬರು ಕುಡಿಯುವ ನೀರಿಗೆ ನಾಲ್ಕು ಬೋರ್‌ವೆಲ್‌ಗಳನ್ನು ಹಾಕಿದರೆ ಅದಕ್ಕೆ motor fix ಮಾಡುವುದಕ್ಕೆ ಎರಡು

ವರ್ಷವಾಗುತ್ತದೆ. ಆಮೇಲೆ ಅವನು ಹೇಳುವ style ನೋಡಿ. ಸಾರ್, ಮೋಟಾರ್ ಒಳಗಡೆ ಹೋಗುವುದಕ್ಕೆ ಆಗಲಿಲ್ಲ, ಏಕೆ ಎಂದರೆ struck ಆಗಿಬಿಟ್ಟಿದೆ. boulders ನಿಂದ struck ಆಗಿದೆ ಎಂದು ಹೇಳುತ್ತಾನೆ. technical line ನಮಗೇನು ಗೊತ್ತಿಲ್ಲ. ನಾವು ಶಾಸಕರುಗಳು. ಇದೆಲ್ಲವನ್ನು ನೋಡಿಕೊಂಡು ಬರುವುದಕ್ಕಾಗುತ್ತದೆಯೇ? ಈಗ ಏನು ಮಾಡಬೇಕು ಎಂದರೆ ಇನ್ನೊಂದು ಸಲ ಅದನ್ನು press ಮಾಡಬೇಕು. ಯಾವಾಗ ಮಾಡುತ್ತೀರಿ ಎಂದರೆ, "ಹಣ ಬಂದ ಮೇಲೆ ಮಾಡುತ್ತೇವೆ ಸಾರ್" ಹಣ ಯಾವಾಗ ಬರುವುದು? ಸಾಧ್ಯವೇ ಇಲ್ಲ. ಆಮೇಲೆ ಅದು entire waste. Is it not a criminal waste? ಅದನ್ನು ಹೇಗೆ ಸರಿ ಮಾಡುವುದು? ಸುಮಾರು 30 ಬೋರ್‌ವೆಲ್‌ಗಳು ಈ ರೀತಿಯಾಗಿದೆ. ಇದರ ಬಗ್ಗೆ ನಾಳೆ DC ಗೆ phone ಮಾಡಬೇಕು. "DC ಸಾಹೇಬರು ಇದ್ದಾರಾ?" "ಒಂಬತ್ತೂವರೆ ಗಂಟೆಗೆ phone ಮಾಡಿದರೆ, ಸಾಹೇಬರು ಸ್ನಾನ ಮಾಡುತ್ತಿದ್ದಾರೆ ಸಾರ್", ಹತ್ತುವರೆಗೆ phone ಮಾಡಿ, "ಯಾರು ಮಾತನಾಡುವುದು? ಕೆಜಿಎಫ್ ಶಾಸಕರು, ಮತ್ತೆ ಸಾಹೇಬರು ಸ್ನಾನ ಮಾಡುತ್ತಿದ್ದಾರೆ ಸಾರ್". What is this? Do you think that all MLAs are bun rogues or butter rogues? Question ಮಾಡುವುದಕ್ಕೂ ಮಿನಿಸ್ಟರ್‌ಗೆ capacity ಇಲ್ಲವೇ? ನಾನು ಇದನ್ನು ಕೇಳುವುದಕ್ಕೆ KGF ನಿಂದ ಕೋಲಾರ್‌ವರೆಗೂ ಹೋಗಬೇಕಾ? What facilities which we have, we have to utilize that. ಸುಮಾರು ಹತ್ತು ದಿವಸವಾಗಿದೆ ನಾನು phone ನಲ್ಲಿ ಮಾತನಾಡಿ. ಆಮೇಲೆ ನಾನೇನಾದರೂ ಜೋರು ಮಾಡಿಬಿಟ್ಟರೆ ನಮ್ಮ ಶಾಸಕರು ಗಲಾಟೆಗೆ ಹೋಗಿದ್ದಾರೆ ಎಂದು ಪತ್ರಿಕೆಗಳಲ್ಲಿ ಬರುತ್ತದೆ. ತಾವು ನೋಡಿದ್ದೀರಿ ತಾನೇ? ಇದಕ್ಕೇನು ಕಾರಣ? What is the reason? ಇದನ್ನು ಮೊದಲು ಸರಿಪಡಿಸಬೇಕು. ಆಮೇಲೆ drought ಬಗ್ಗೆ ಮಾತನಾಡುವುದು. ನಾವು ಸುಮ್ಮನೆ drought, drought ಎಂದು ಹೇಳಿ ಭಾಷಣವನ್ನು ಮಾಡಿಬಿಟ್ಟರೆ ಕೊನೆಗೆ session ಮುಗಿದಾದ ಮೇಲೆ ನಮ್ಮ ಶಾಸಕರು ಅಲ್ಲಿ ಭಾಷಣವನ್ನು ಮಾಡಿ ಬಂದಿದ್ದಾರೆ, 50 ಬೋರ್‌ವೆಲ್‌ಗಳನ್ನು ಹಾಕಿ ನೀರು ಕೊಡುತ್ತಾರೆಂದರೆ, ಗೌರವ ಇದೆಯೇ? Ministers' subordinates ಹೇಗೆ ಇರಬೇಕೆಂದರೆ, they must have knowledge. They should possess more knowledge and give guidelines. ಹಳೆಯ ಕಾಲದಲ್ಲಿ ರಾಜರುಗಳು ಇದ್ದ ಕಾಲದಲ್ಲಿ ತಾವು ನೋಡಿರಬಹುದು. ಗಣಪತಿಯನ್ನು ತೆಗೆದುಕೊಂಡು ಹೋಗುತ್ತಾರೆ ನೋಡಿ, ಕೆರೆಗಳಲ್ಲಿ ಹಾಕುವುದಕ್ಕೆ. ಈಗಲೂ practice ಇದೆ. Olden days ನಲ್ಲಿ ಮಹಾರಾಜರು ವಿಲೇಜ್ ಕಡೆ ಇರುವ ಮಿನಿಸ್ಟರ್‌ಗೆ ಹೇಳಿ ಅದರ ಮೇಲೆ ಚಿನ್ನ,

ಸಿಲ್ವರ್, ಎಲ್ಲ ಹಾಕಿ ದೊಡ್ಡ festival ನ್ನು ಮಾಡಿ ಗಣಪತಿಯನ್ನು ಕೆರೆಗಳಲ್ಲಿ ಹಾಕುತ್ತಿದ್ದರು. ಅದು ಎಲ್ಲ ಜನರಿಗೂ ಗೊತ್ತಾಗುವ ರೀತಿ. ಬರಗಾಲ ಬರುವ ಸಮಯದಲ್ಲಿ, dry ಆಗುವ ಸಮಯದಲ್ಲಿ ಜನರು ಯೋಚನೆಯನ್ನು ಮಾಡುತ್ತಾರೆ, ಅಯ್ಯೋ ರಾಜರು ಗಣೇಶನನ್ನು ಕೆರೆಗೆ ತೆಗೆದುಕೊಂಡು ಹೋಗಿ ಹಾಕುವಾಗ ಬೇಕಾದಷ್ಟು ಚಿನ್ನ, ಸಿಲ್ವರ್ ಎಲ್ಲವನ್ನೂ ಹಾಕಿದ್ದಾರಲ್ಲವಾ, ನಾವು ಹೋಗಿ ಈಗ ಅದನ್ನು ತೆಗೆದುಕೊಳ್ಳೋಣ ಎಂದು ಆ ವಿಲೇಜ್‌ನವರೆಲ್ಲ ಸೇರಿ ಅಲ್ಲಿ de-silting ತರಹ ಚಿನ್ನ ಇದೆಯೋ ಇಲ್ಲವೋ ಎಂದು ತೆಗೆದು ತೆಗೆದು ನೋಡುವುದು, ಚಿನ್ನ ಸಿಗುತ್ತಾ, ಸಿಲ್ವರ್ ಸಿಗುತ್ತಾ ಎಂದು. ಅಂಥ ಸಂದರ್ಭದಲ್ಲಿ ಏನಾಗುತ್ತೆ ಅದು automatic ಆಗಿ ಅದು de-silting ಆಗಿಬಿಡುತ್ತೆ. ಮಳೆ ಬಂದ ತಕ್ಷಣ ನೀರು ತುಂಬಿಕೊಳ್ಳುತ್ತೆ. This was the idea. ಆ ಕಾಲದ ರಾಜ, ಗಣೇಶನನ್ನು ಈ ರೀತಿ ಮಾಡಿಕೊಂಡು ಹೋಗುತ್ತಿದ್ದರೆ ಈ ಕಾಲದಲ್ಲೂ ಹಾಗೇ ಹೋಗುವುದು. ಈಗ gold ಎಲ್ಲ ಹಾಕುವುದಿಲ್ಲ. This is the knowledge of a Minister. ನಿಮ್ಮದು ಹೇಗೆ ಎಂದರೆ ನಾವು ಯಾರಿಗಾದರೂ ಗುಲಾಮರಾಗಿ ನಮಸ್ಕಾರ ಹೇಳಿಕೊಂಡು, ಕೈಕಟ್ಟಿಕೊಂಡು ನಮ್ಮ ಡಿಸಿ ಸಾಹೇಬರು ಬಹಳ ಒಳ್ಳೆಯವರು, ಅವರು ದೇವರ ತರಹ ಎಂದು ಹೇಳಬೇಕು. ಇವರನ್ನು ದೇವರನ್ನಾಗಿ ಮಾಡಲು ನಾನು ಆ ರೀತಿ ಇರಬೇಕು. ಹೇಗಿದೆ? ಇಷ್ಟೆಲ್ಲ ಹೇಳಿದ ಮೇಲೆ ಪಾಪ, ಅವನಿಗೆ ಎರಡು bore well ಕೊಡಿ ಎಂದು ಹೇಳುತ್ತಾರೆ. That should not happen. You must say. Where you have any records? ನನ್ನ ಕ್ಷೇತ್ರಕ್ಕೆ ನೀವೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಸುತ್ತಮುತ್ತ ಕೆರೆಗಳೇನು ಇಲ್ಲ. ನಮ್ಮ in charge Minister ಗೆ ಗೊತ್ತಿದೆ. ನಾನು ಹೇಳುವುದೇನಾದರೂ ಸುಳ್ಳಿದ್ದರೆ ನೀವು ಯೋಚನೆ ಮಾಡಿ. BGML ಅನ್ನು ಮುಚ್ಚಿದ ಮೇಲೆ ಅಲ್ಲಿ facilities ಇಲ್ಲ. Welfare ಇಲ್ಲ. Toilet ಇಲ್ಲ. ಕೋಟ್ಯಾಂತರ ರೂಪಾಯಿ SC/ST Corporation ನಲ್ಲಿದೆ. ಅವರನ್ನು ಹೋಗಿ ಕೇಳಿ, ನಮಗೆ ಶೌಚಾಲಯಗಳನ್ನು ಕಟ್ಟುವುದಕ್ಕೆ ಬರುವುದಿಲ್ಲವೆನ್ನುತ್ತಾರೆ. ಏನು ವಿಧಾನಸೌಧವನ್ನು ಕಟ್ಟುವುದಕ್ಕಾಗುತ್ತದೆಯೇ? Can't you divert that amount? ಅದಕ್ಕೆ financial constraints ಇರಬೇಕು. What is this? Is it such a Himalayan task you are talking of ? Nothing. ಗಂಗಾಕಲ್ಯಾಣ ಸ್ಕೀಮನ್ನು ಕೊಟ್ಟರು. KGF ಗೆ 15 ಬೋರ್‌ವೆಲ್, ಅಲ್ಲಿ ಒಬ್ಬ ರೈತರ ಹತ್ತಿರವೂ ಎರಡು ಎಕರೆ ಜಮೀನಿಲ್ಲ. ಏನು ಮಾಡಬೇಕು ಅದನ್ನು ತೆಗೆದುಕೊಂಡು ಯಾರು ಇದರ ಬಗ್ಗೆ ಯೋಚನೆ ಮಾಡಬೇಕು? ಈಗ ನಮಗೆ Rural development, NABARD ನಮಗೆ ಬರುವುದಿಲ್ಲ, ಗ್ರಾಮ ಪಂಚಾಯಿತಿ ನಮಗೆ

ಬರುವುದಿಲ್ಲ, ಎಂದು cancel ಮಾಡುವವರು ನೀವು. ಗಂಗಾಕಲ್ಯಾಣ ಸ್ಕೀಮನ್ನು ಕೊಡಿ ಎಂದು ಯಾರು ನಿಮ್ಮನ್ನು ಕೇಳಿದ್ದರು? ನಾವು ಕಸ ತಿನ್ನುವವರು ಸ್ವಾಮಿ. ನೀವು ಊಟ ತಿನ್ನುವವರು ಹೇಗೆ assess ಮಾಡಿಕೊಟ್ಟಿರಿ? ಇದು ಸುಮಾರು ಒಂದು ವರ್ಷದಿಂದ ಹಾಗೇ ಇದೆ. ನಾನು ಅದನ್ನು ಉಪಯೋಗ ಮಾಡಿಲ್ಲ. I have never misused. I can challenge with any subordinates in any department. I am not a corrupt MLA. I am not. I can just challenge in front of my Minister. Let him conduct an enquiry about me. Not even one rupee, one inch of land I have grabbed in my constituency. ಅಂದರೆ ನಮ್ಮ ನೋವು ಎಷ್ಟಿರಬೇಕು ನೋಡಿ. ಅದರಿಂದ ನಾನು ಕೇಳುತ್ತಿದ್ದೇನೆ, ಸಾರ್, 15 ಬೋರ್‌ವೆಲ್‌ಗಳು backward class ಗೆ ಬಂದಿದೆ, ಗಂಗಾ ಕಲ್ಯಾಣಕ್ಕೆ ಬಂದಿದೆ, ಕುಡಿಯುವ ನೀರಿಗೇನಾದರೂ ಉಪಯೋಗ ಮಾಡುವುದಕ್ಕಾಗುತ್ತದೆಯೇ ಎಂದರೆ, "no, no, rule will not permit" ಎನ್ನುತ್ತಾರೆ. ಏನು ಆಕಾಶದಿಂದ ಬಂದಿದೆಯೇ ರೂಲು? Why it is not permissible? Why you should not conduct? ಹಾಗಾದರೆ ಅದು ಏನಾಗಬೇಕು? This is the way you are supporting the people. ನೀವು ಜನರ ಮೇಲೆ ಪ್ರೀತಿಯನ್ನು ಇಟ್ಟುಕೊಂಡಿರುವವರು. ನೀವು ಜನರಿಗೆ ಸಹಾಯವನ್ನು ಮಾಡುವವರು. ಇದೆಲ್ಲ ನಾನು ಹೇಳಿದರೆ ನಿಮಗೆ ಕೋಪ ಬರುತ್ತದೆ. ನಮ್ಮ ಸರ್ಕಾರದ ಮೇಲೆ ಏಕೆ ಹೀಗೆ ಹೇಳುತ್ತೀರಿ ಎನ್ನುತ್ತೀರಿ. ಸರ್ಕಾರ ಯಾವುದಿದ್ದರೂ ನಾನು ಹೀಗೆಯೇ ಹೇಳಬೇಕು. ನಾಳೆ ನಾನು ಪದವಿಯಲ್ಲಿ ಕುಳಿತುಕೊಂಡರೂ ಇದೇ subject. How you are going to solve this? How you are going to protect the people from summer? ಅಲ್ಲಿ ಕೆರೆಯೇ ಇಲ್ಲ. ನೀರು ಹೇಗೆ ಬರಬೇಕು? Thousand feet ಕೊರೆದರೂ ನೀರು ಸಿಗುವುದಿಲ್ಲ. It is a dry area. ಅವರಿಗೆ ನೀರಿಗೆ ಹೇಗೆ ವ್ಯವಸ್ಥೆಯನ್ನು ಮಾಡಬೇಕು? ನಿಮ್ಮ ಅಧಿಕಾರಿಗಳು ಇದರ ಬಗ್ಗೆ ಏನಾದರೂ ಯೋಚನೆಯನ್ನು ಮಾಡಿದ್ದಾರಾ? I have taken more risk, taken water from the underground. ಎಲ್ಲೆಲ್ಲಿ ಮುಚ್ಚಿದ್ದಾರೋ ಆ belt ಗಳನ್ನೆಲ್ಲಾ ನೋಡಿ ಅಲ್ಲೆಲ್ಲಾ bore ಹಾಕಿ tank ಗಳಿಂದ ಮಾಡಿಸಬೇಕು. ಯಾವ tank, gravitation tank, ಬ್ರಿಟೀಷರ ಕಾಲದಲ್ಲಿ ಇದ್ದವುಗಳನ್ನು use ಮಾಡಿಕೊಂಡು ನಾವು ನೀರನ್ನು ಕೊಡುತ್ತಿದ್ದೇವೆ. ಇವರ ವಾಟರ್ ಬೋರ್ಡ್ ಆಗಿರಲಿ, DC ಆಗಿರಲಿ, 'How is the position Mr. Rajendran?' ಸಾರ್, ಸ್ವಲ್ಪ ನೀರಿಗೆ ಹಣ ಬೇಕೆಂದರೆ, 'Wait, wait, we will try to help you.' Wait ಎಂದು ಹೇಳಿ ಎರಡು

ವರ್ಷವಾಯಿತು. ನಾವು ಯಾರ ಹತ್ತಿರ ಕೇಳುವುದು? Who will support me? ಪ್ರತಿಯೊಂದಕ್ಕೂ ಮುಖ್ಯಮಂತ್ರಿಗಳ ಹತ್ತಿರ ನಾವು ಹೋಗುವುದಕ್ಕಾಗುತ್ತದೆಯೇ? ದಿನವೂ ನಾವು ಮುಖ್ಯಮಂತ್ರಿಗಳನ್ನು ನೋಡುವುದಕ್ಕಾಗುತ್ತದೆಯೇ? How you are going to solve this? ಗ್ರಾಮ ಪಂಚಾಯಿತಿಯಲ್ಲಿ fund ನಮಗೆ ಇಲ್ಲ. ನಮ್ಮ ಊರು ಸಿಟಿ. ಹೆಸರಿಗೆ ಸಿಟಿ ಸ್ವಾಮಿ ಅದು. ಹೆಸರು ಮಾತ್ರ ಸಿಟಿ, but worser than the village. ಹೈದರಾಬಾದ್‌ನಲ್ಲಿ ಚಾರ್ಮಿನಾರ್ ಇದೆ, ಅದು ಚಾರ್ಮಿನಾರ್. ಹೋಗಿ ನೋಡಿದ್ದೀರಾ? ಮಿನಾರ್ ಯಾವ ರೀತಿ ಇದೆ ಎಂದು. Photo ಎಲ್ಲ ಚೆನ್ನಾಗಿರುತ್ತೆ. ಅಲ್ಲಿಗೆ ಹೋಗಿ ನೋಡಿದರೆ ಯೂರಿನ್ ಸ್ಮೆಲ್, ಕಕ್ಕಸ್ ಸ್ಮೆಲ್ ಪೂರ್ತಿ. ಹೆಸರು ಚಾರ್ಮಿನಾರ್. ಆ ತರಹ ಇದೆ KGF ಸ್ಥಿತಿ. ಸಾರ್, ಅಲ್ಲಿ welfare ಇಲ್ಲ. Drainage ಕಟ್ಟಲು ದುಡ್ಡಿಲ್ಲ. Drinking waterಗೆ ದುಡ್ಡಿಲ್ಲ. Total mining area has been blocked. Earlier when BGML was running well, they used to give facilities. ಆ BGML ನವರು ಕೇಂದ್ರ ಸರ್ಕಾರ 22 ಲಕ್ಷ ವರ್ಷಕ್ಕೆ ನಮಗೆ ಕೊಡುತ್ತಿದ್ದಾರೆ. ಕುಡಿಯುವ ನೀರು, ಮತ್ತು water maintain ಮಾಡುವುದಕ್ಕೆ. Water Board ಗೆ 98 ಲಕ್ಷ ಬಂದಿದೆ. ಅವರ MD secretary ಏನೂ ಚಿಂತನೆಯನ್ನೇ ಮಾಡುವುದಿಲ್ಲ. ``We will see into that. Chief Engineer ಹೊರಗಡೆ ಹೋಗಿದ್ದಾರೆ. ``My Minister should know about this Sir. ಕೇಂದ್ರ ಸರ್ಕಾರ BGML ನವರಿಗೆ ಕೊಟ್ಟಿರುವ ಹಣವನ್ನು ಕೊಡಲು ಯೋಗ್ಯತೆ ಇಲ್ಲ ಇವರಿಗೆ. ನಾವು Chief Engineerಗೆ ಕೇಳಿದರೆ ತಾವು ಒಂದು ಮಾತನ್ನು ಹೇಳಿ ಎನ್ನುತ್ತಾರೆ. MD ಯನ್ನು ಕೇಳಿದರೆ ತಾವು ಒಂದು ಮಾತನ್ನು Secretaryಗೆ ಹೇಳಿ ಎನ್ನುತ್ತಾರೆ. With whose money they are enjoying and sitting in the chair? ಅವರು ತಿಂಗಳಿಗೆ ಸಂಬಳವನ್ನು ತೆಗೆದುಕೊಳ್ಳುವುದಿಲ್ಲವೇ? ನಾನು ಹೋಗಿ ಕೇಳಲು ನನಗೇನು ಗ್ರಹಚಾರ? When I am bringing this to your notice, it is your bounden duty to provide shelter immediately to my people. 98 ಲಕ್ಷ ತುಂಬಿಕೊಂಡಿದ್ದಾರೆ. 20 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ಎಂದರೆ ಇವರು ಅವರನ್ನು ಕೇಳಬೇಕು, ಅವರು ಇವರನ್ನು ಕೇಳಬೇಕು. You must suspend them immediately. ಆದರೆ ನಿಮಗೆ guts ಇಲ್ಲ. ನಿಜವಾಗಲೂ Revenue Minister ಅವರೇ, ನೀವು ನಾಲ್ಕೈದು ಜನರನ್ನು suspend ಮಾಡಿ. ಏನೂ ಆಗುವುದಿಲ್ಲ. ಆಕಾಶ ಬಿದ್ದು ಹೋಗುವುದಿಲ್ಲ. ತಾವು ಈ ಕಡೆ ಕುಳಿತುಕೊಂಡು ಎಷ್ಟು ಗಂಭೀರವಾಗಿ ಮಾತನಾಡಿದಿರಿ? ಬರಗಾಲದ ಬಗ್ಗೆ ತಾವು challenge ಮಾಡಿದಿರಿ. ಈಗ ನಿಮ್ಮ ಅಧಿಕಾರಿಗಳನ್ನು suspend ಮಾಡಿ. ಏನು ಆಗುತ್ತದೆ?

ನಮ್ಮ ಸಿಸ್ಟಂ ಹೇಗಿದೆ ಎಂದರೆ, ಅಧಿಕಾರಿಗಳು ಕಾಲಮೇಲೆ ಕಾಲು ಹಾಕಿಕೊಂಡು Minister ಮುಂದೆ ಕುಳಿತುಕೊಳ್ಳುತ್ತಾರೆ. ಹೋಗಿ ತಮಿಳುನಾಡಿನಲ್ಲಿ ನೋಡಿ. ನಿಲ್ಲಿಸೋಕೆ ತಾಕತ್ತು ಇದೆಯೇ? ನೋಡಿ. That is the command. We are not under feudal lords. But, we must command. ಅದಕ್ಕೇ minister. ನಾವು Minister ಹತ್ತಿರ ಹೋಗಿ ಹೇಳದಿದ್ದರೆ, ನಮ್ಮ ಕೆಲಸವಾಗುತ್ತದೆಯೇ? ಆ ಭಾವನೆ ಜನರಿಗೆ ಬಂದುಬಿಟ್ಟಿರುತ್ತದೆ. ಎಷ್ಟು ಸಲ Minister ಹತ್ತಿರ ಹೇಳಿದರೂ ನನ್ನ ಕೆಲಸ ಆಗಿಲ್ಲ. Secretary, Director, Joint Director ಮತ್ತು ಒಬ್ಬ ordinary officerನ್ನು quote ಮಾಡಿ ಅವರು ಮಾತ್ರ sign ಮಾಡಿಬಿಟ್ಟರೆ, ಆಗುತ್ತದೆಯೇ ಸ್ವಾಮಿ? Ministerಗೆ ಕೊಟ್ಟರೂ ಆಗುವುದಿಲ್ಲವೆಂದರೆ, ನಮಗೆ ಗೌರವವಿರುತ್ತದೆಯೇ? ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ. ನಾನು ಇಷ್ಟೆಲ್ಲ ಹೇಳುತ್ತಿದ್ದೇನೆ. ಆದರೆ, ನೀವು ನಮಗೆ ಉತ್ತರ ಕೊಡುವ ಸಮಯದಲ್ಲಿ ನನ್ನ ಕ್ಷೇತ್ರಕ್ಕೆ ಕುಡಿಯುವ ನೀರಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂಬುದರ ಬಗ್ಗೆ ಹೇಳಲೇ ಬೇಕು. ಎರಡನೆಯದು, ಎಷ್ಟು ಹಣವನ್ನು ನೀವು ಬಿಡುಗಡೆ ಮಾಡುತ್ತೀರೆಂಬುದನ್ನು ಹೇಳಬೇಕು. Recently my in-charge Minister had come. ಅವರು ನೋಟೀಸ್ ಕೇಳಿದರು. Discretion powerನಲ್ಲಿ ಏನಾದರೂ ಸ್ವಲ್ಪ ಹಣ ಕೊಡಿ, ಸರ್, ನಾವು develop ಮಾಡುತ್ತೇವೆ. ಕುಡಿಯುವ ನೀರಿಗೆ 3040. ಈ ನಂಬರುಗಳನ್ನು ಕೊಟ್ಟುಬಿಡುತ್ತಾರೆ. National Highway Road, KSIDC ಏನೇನು ಹೆಸರುಗಳಿವೆಯೋ, ಎಲ್ಲದಕ್ಕೂ 3040. I am just bringing it to your notice, Executive Engineer ಕರೆದು Minister ಮುಂದೆ ತೋರಿಸಿದೆ. ನನಗೆ sanction ಮಾಡಿ ಒಂದು ರೋಡನ್ನು ಕೊಟ್ಟಿದ್ದಾರೆ, ಕೆಲಸವಾಗಿದೆ. 3 ಕಿಲೋಮೀಟರ್ ಎಂದು ಬರೆದುಕೊಂಡು, ಒಂದೂವರೆ ಕಿಲೋಮೀಟರ್‌ಗಳಷ್ಟು ಕೆಲಸ ಮಾಡಿದ್ದಾರೆ. ನೀವು ಕೋಟಿಗಟ್ಟಲೆ ಇಷ್ಟು ಹಣವನ್ನು ಕೊಡುತ್ತಿದ್ದೇವೆಂದು ಹೇಳುತ್ತೀರಿ. ಇಷ್ಟು roads, ಇಷ್ಟು bridges ಎಂದು ಹೇಳಿ, ಬರೀ publicity, vast publicity. ಎರಡೂವರೆ ವರ್ಷವಾಗಿದೆ. 3 ಕಿಲೋಮೀಟರ್‌ಗಳಷ್ಟು ರಸ್ತೆ ಕೆಲಸ ಇನ್ನೂ complete ಆಗಿಲ್ಲ. ದುಡ್ಡೇ ಬಂದಿಲ್ಲ ಅಲ್ಲವೇ? ಆದ್ದರಿಂದ, ಅದನ್ನು ಹಾಗೇ ಇಟ್ಟಿದ್ದೀರಿ. Work ಪ್ರಾರಂಭವಾಗಿ ಎರಡೂವರೆ ವರ್ಷವಾಗಿದೆ. ಎರಡು ವರ್ಷಗಳಷ್ಟು pending ಏಕೆ ಆಗಿದೆಯೆಂದರೆ, ಅದಕ್ಕೆ ದುಡ್ಡು ಇನ್ನೂ ಬಿಡುಗಡೆ ಮಾಡಿಲ್ಲ. What is the reason on which you are releasing this work order? He was a former PWD Minister. ತಪ್ಪಲ್ಲವೇ? ಅರ್ಧಂಬರ್ಧ ಮಾಡಿಬಿಟ್ಟಿದ್ದಾರೆ, ಜನರು ನನ್ನನ್ನು ಕೇಳುತ್ತಾರೆ. ನಾನು ಅವರಿಗೆ ಎಷ್ಟು ಸುಳ್ಳು ಹೇಳಬಹುದು? ನೀವು ಸುಳ್ಳು

ಹೇಳಿದರೆ, ಅದನ್ನು ದಿನವೂ ನಾವು ಕೇಳಿಕೊಂಡಿರುತ್ತೇವೆ. ನೀವು ದಿನವೂ ಒಂದಿಪ್ಪತ್ತು ಸುಳ್ಳು ಹೇಳುತ್ತೀರಿ. ನಾವೂ ಕೇಳಿಕೊಂಡಿದ್ದೇವೆ. ನಾವು ಸುಳ್ಳು ಹೇಳುವುದಕ್ಕಾಗುತ್ತದೆಯೇ? ನೀವು ಹೇಳುತ್ತಿರುವ ಸುಳ್ಳುಗಳನ್ನು ದಿನವೂ ನಮಗೆ ಕೇಳಿ ಕೇಳಿ practice ಆಗಿಬಿಟ್ಟಿದೆ. ಸುಳ್ಳು ಕೇಳದಿದ್ದರೆ ನಿದ್ರೆಯೇ ಬರುವುದಿಲ್ಲ ಸ್ವಾಮಿ! ನಾವು ಆ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ಈಗ ನಮ್ಮನ್ನು ಆ ತರಹ ಮಾಡಿಬಿಟ್ಟಿದ್ದಾರೆ. ಇಲ್ಲಿ ಸುಳ್ಳು ಮಾತುಗಳನ್ನು ಕೇಳಿದ ಬಳಿಕ ಮನೆಗೆ ಹೋಗಿ ಸುಳ್ಳು ಹೇಳಿದರೇನೇ ನಮಗೆ ನಿದ್ರೆ ಬರುವುದು! ನಮ್ಮನ್ನು ಹಾಗೆ train ಮಾಡಿಟ್ಟಿದ್ದಾರೆ. ಕಳೆದ ಎರಡೂವರೆ ವರ್ಷಗಳಿಂದ road ಆಗಿಲ್ಲ. ಎಲ್ಲವನ್ನೂ ನಾನು in-charge Ministerಗೆ ಹೇಳುವುದಕ್ಕಾಗುತ್ತದೆಯೇ? ಅವರ portfolio ಕೆಲಸ ಮಾಡುವ ತರಹ ಪ್ರತಿಯೊಂದೂ department ಅನ್ನು ಮಾಡುವುದಕ್ಕಾಗುತ್ತದೆಯೇ? ಅವರವರ ಡಿಪಾರ್ಟ್‌ಗಳಲ್ಲಿರುವವರು ಅವರವರ ಕೆಲಸಗಳನ್ನು ಮಾಡಿದರೆ ನಾವು ಇಷ್ಟು ಭಾಷಣ ಮಾಡುವ ಅವಶ್ಯಕತೆಯೇ ಇಲ್ಲ. ನಾನು ಯಾವಾಗಲೂ publicityಗೋಸ್ಕರ ಭಾಷಣ ಮಾಡುವುದಿಲ್ಲ. ಪತ್ರಿಕೆಯಲ್ಲಿ ನನ್ನ ಹೆಸರು ಬರಬೇಕು, ಟಿವಿಯಲ್ಲಿ ನನ್ನನ್ನು ತೋರಿಸಬೇಕು. ಅವರು ತೋರಿಸುವುದಿಲ್ಲ. ಅದಕ್ಕೋಸ್ಕರ, ನಾನು ಮಾತನಾಡುವುದೂ ಇಲ್ಲ. ಅದರ ಬಗ್ಗೆ ನಾನು ಚಿಂತನೆ ಮಾಡುವುದಿಲ್ಲ. ನಾನು ಜನರಿಗೆ ಮಾತ್ರ ನನ್ನ ಮುಖ ತೋರಿಸುವುದು. ನನಗೆ ಓಟು ಕೊಟ್ಟು ಗೆಲ್ಲಿಸಿ, ಇಲ್ಲಿ ಕುಳಿತುಕೊಳ್ಳುವುದಕ್ಕೋಸ್ಕರ ಕಳುಹಿಸಿರುವುದು not by media or through publicity. My people who respect me a lot, who expect from me a lot ಅವರು ನನ್ನ ದೇವರು. ಅಂತಹ ಜನರಿಗೆ ಈ summerನಲ್ಲಿ ಕುಡಿಯುವ ನೀರನ್ನು ಕೊಡಲಿಲ್ಲವೆಂದರೆ, ನನ್ನ ಗೌರವ ಏನಾಗಬೇಕು? ನನ್ನ ಮಾನ–ಮರ್ಯಾದೆ ಏನಾಗಬೇಕು? ನನಗೊಂದು ಬಟ್ಟೆ, ಷರ್ಟು, ಪ್ಯಾಂಟು ಎಂದು ಕೇಳುತ್ತಾರೆ. ಮತ್ತೆ ನಾನು ಏನಾಗಬೇಕು? ಹುಚ್ಚನ ತರಹ ಬೀದಿ ಬೀದಿಗಳಲ್ಲಿ ಹೋಗಬೇಕು. ಈ ಸ್ಥಿತಿಗೆ ನಾನು ಬರಬಾರದು. ಆದ್ದರಿಂದ, agricultureನಲ್ಲಿ ಈ ರೀತಿ ಆಗಿದೆ, ರೈತರುಗಳಿಗೆ ಹೀಗಾಗಿದೆ ಎಂದು ನಾನು ಏನೂ ಕೇಳಲಿಲ್ಲ ಸ್ವಾಮಿ. ಅಲ್ಲದೆ, ಶೌಚಾಲಯಗಳನ್ನು ಕೊಡಿ ಎಂದೂ ಕೇಳಲಿಲ್ಲ. ಕುಡಿಯುವ ನೀರು, ನೀವು ಯಾವ ಗಂಗಾಕಲ್ಯಾಣ ಸ್ಕೀಮ್ ಕೊಡುತ್ತೀರೋ, ನಮ್ಮ reserve constituencyನಲ್ಲಿ ಏನೇನಿದೆ, ಆ ಗಂಗಾಕಲ್ಯಾಣ ಸ್ಕೀಮ್ ಅನ್ನು at least you convert it into drinking water scheme and give it to us. Nothing wrong in that. Backward Class schemeನಲ್ಲಿ ಎಂಟು ಬೋರ್‌ವೆಲ್‌ಗಳಿವೆ ಸರ್, ಯಾವಾಗ ಹಾಕಿಕೊಳ್ಳುತ್ತೀರಿ? ಈ ಮಾರ್ಚಿಯೊಳಗೆ ಹಾಕಿಕೊಳ್ಳಬೇಕು ಸರ್,

ಎಂದು Backward Classes Departmentನವರು ನನ್ನನ್ನು ಕೇಳುತ್ತಾರೆ. ನಾನು ಅದನ್ನು ಎಲ್ಲಿ ಹಾಕುವುದು? ನನಗೆ land ಇಲ್ಲ. Display ಮಾಡಬೇಕಾಗುತ್ತದೆ. ನಾನು display ಮಾಡುವುದಕ್ಕಾಗುವುದಿಲ್ಲ. ಅದು open ಆಗಿ transparent ಆಗಿ crystal clear ಆಗಿ ಜನರಿಗೆ ಕೊಡಿ. Why the law will not permit? Who makes the law? ಏನಿದು ಬಹಳ ದೊಡ್ಡದೇ? Data change ಮಾಡಬೇಕೆಂದೇನಾದರೂ ಕೇಳಿದ್ದೆನೆ? Constitution ಅನ್ನು fundamental ಆಗಿ change ಮಾಡಬೇಕೆಂದೇನಾದರೂ ಕೇಳಿದ್ದೆನೆ? What is wrong in that? Small, small administration ಮಾಡುವುದಕ್ಕೆ ಈ ಸರ್ಕಾರಕ್ಕೆ ಯೋಗ್ಯತೆ ಇಲ್ಲವೆಂದರೆ, ನಾನು drought ಬಗ್ಗೆ ಏನು ಮಾತನಾಡುವುದು? ಆದ್ದರಿಂದ, ಅಧ್ಯಕ್ಷ ಸ್ಥಾನದಲ್ಲಿರುವ ತಾವು you must insist the Government, the concerned Minister, or my in-charge Minister to provide minimum of at least Rs. 240 lakhs to tackle my people's drinking water problem. Atleast ಅದನ್ನಾದರೂ ಮಾಡಿಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

7. ಪ್ರಕಟಣೆ :

ಉಪಾಧ್ಯಕ್ಷರು: ಈಗ ಒಂದು ಪ್ರಕಟಣೆ. ಸಾಯಂಕಾಲ 5 ಗಂಟೆಗೆ Oneness Union Universityಯ ಶ್ರೀ ಸುರೇಂದ್ರ ದಾಸಾಜಿ ಹಾಗೂ ಶ್ರೀ ನಮದ್ ದಾಸಾಜಿ ಅವರಿಂದ ***"ಮನುಷ್ಯನ ಪ್ರಜ್ಞೆಯ ಅಭಿವೃದ್ಧಿಯ ಮೂಲಕ ಆರ್ಥಿಕ, ಸಾಮಾಜಿಕ ಪ್ರಗತಿ"*** ಎನ್ನುವ ವಿಷಯದ ಮೇಲೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಉಪನ್ಯಾಸವಿದೆ. ಎಲ್ಲ ಮಾನ್ಯ ಸದಸ್ಯರುಗಳು ಭಾಗವಹಿಸಬೇಕೆಂದು ಕೋರುತ್ತೇನೆ.

ಈಗ ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 4 ಗಂಟೆ 55 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 9ನೇ ಫೆಬ್ರವರಿ 2007 ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)